ಡಾ. ಎನ್.ಆರ್. ನಾಯಕ

ವ್ಯಕ್ತಿ ಪರಿಚಯ

ಸುಮುಖಾನಂದ ಜಲವಳ್ಳಿ



ಜನಪ್ರಿಯ ಜಾನಪದ ಪುಸ್ತಕ ಮಾಲೆ-೩೯

ಡಾ. ಎನ್. ಆರ್. ನಾಯಕ

ವ್ಯಕ್ತಿ ಪರಿಚಯ

ಸುಮುಖಾನಂದ ಜಲವಳ್ಳಿ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು-೫೬೦ ೦೫೪

Dr. N. R. NAYAKA - A Pen Portrait - By **Sumukhananda Jalavalli.** Pulished by **Karnataka Janapada Parishathu.** No. 1, Jaladarshini Layout, Near M. S. Ramaiah Hospital Gate, New BEL Road,
Bangalore-560 054,
Phone : 080-23605033. Janapada Loka : 7201143

ಪ್ರಥಮ ಮುದ್ರಣ : ೨೦೦೯ ಪುಟಗಳು : ೪೪

ಪ್ರತಿಗಳು : ೨೦೦೦

ಬೆಲೆ : **ರೂ. ೧೫** (ಹದಿನೈದು ರೂಪಾಯಿ)

ಮುದ್ರಕರು :
ಚಂದನ ಪ್ರಿಂಟರ್ಸ್
ನಂ. ೫೭, ವಿನಾಯಕ ಕಾಂಪ್ಲೆಕ್ಸ್
೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ
ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ 'ಜನಪ್ರಿಯ ಜಾನಪದ ಪುಸ್ತಕ ಮಾಲೆ'ಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ– ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ಅಥವಾ ಹದಿನೈದು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಖ್ಯಾತ ಲೇಖಕರಾದ **ಸುಮುಖಾನಂದ ಜಲವಳ್ಳಿ** ಅವರು **ಡಾ. ಎನ್. ಆರ್. ನಾಯಕ** ಅವರನ್ನು ಕುರಿತ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇವೆ.

ಜಿ. ನಾರಾಯಣ
ಅಧ್ಯಕ್ಷರು
ಕರ್ನಾಟಕ ಜಾನಪದ ಪರಿಷತ್ತು

೦೧-೧೨-೨೦೦೯
ಬೆಂಗಳೂರು

ಡಾ|| ಎನ್.ಆರ್. ನಾಯಕ

ತನಗಾಗಿ ತಾನು ಬದುಕುವುದು ಒಂದು ಪರಿ. ಇಂಥವರು ಇಲ್ಲಿ ತಮ್ಮ ಬಗ್ಗೆ ಮಾತ್ರ ತಾವು ಆಲೋಚನೆ ಮಾಡುತ್ತಾರೆ. ಹೆಚ್ಚಿಗೆ ಅಂದರೆ ತಮ್ಮ ಕುಟುಂಬದ ಬಗ್ಗೆ ಅಷ್ಟೆ. ಇದು ತಪ್ಪು ಅಂತಲ್ಲ. ತನ್ನ ಉದ್ಧಾರದ ಬಗ್ಗೆ ತಾನು ಯೋಚಿಸದವನು ಅಥವಾ ಯೋಚಿಸದವಳು ಪ್ರಗತಿ ಹೊಂದಲು ಸಾಧ್ಯವಿಲ್ಲ. ಆದರೆ ತಾನು ತಾನು ಎನ್ನುತ್ತ ಸ್ವಾರ್ಥಿಯಾಗುವುದು ತಪ್ಪು. ಅಂಥವರು ಸಮಾಜವನ್ನು ತಮಗಾಗಿ ಬಳಸಿಕೊಳ್ಳುತ್ತಾರೆ. ಸಮಾಜದಲ್ಲಿ ತಾವು ಮಾತ್ರ ಬೆಳೆಯುತ್ತಾರೆ; ತಮ್ಮವರನ್ನು ಬೆಳೆಸುತ್ತಾರೆ.

ಸಮಾಜಕ್ಕಾಗಿ, ದೇಶಹಿತಕ್ಕಾಗಿ, ನಾಡು, ನುಡಿ, ಸಂಸ್ಕೃತಿಗಾಗಿ ಬದುಕುವವರ ಪರಿ ಇನ್ನೊಂದು. ಇಂಥವರಿಗೆ ಸಮಾಜದ ಅಥವಾ ಯಾವುದನ್ನು ನೆಚ್ಚಿಕೊಂಡಿರುತ್ತಾರೋ ಅದರ ಒಳಿತು ಮುಖ್ಯವಾಗುತ್ತದೆ. ಅದಕ್ಕಾಗಿ ದುಡಿಯುತ್ತಾರೆ; ಅದಕ್ಕಾಗಿ ತ್ಯಾಗ ಮಾಡುತ್ತಾರೆ; ಅದಕ್ಕಾಗಿ ಕಷ್ಟ ಪಡುತ್ತಾರೆ; ನಷ್ಟ ಅನುಭವಿಸುತ್ತಾರೆ. ಅದರ ಒಳಿತಿನಲ್ಲಿ ಸುಖ ಪಡುತ್ತಾರೆ. ಹಿಡಿದ ಕೆಲಸವನ್ನು ಬಿಡದೆ ಸಾಧಿಸುತ್ತಾರೆ. ಇಂಥವರದ್ದು ಸಮಾಜಮುಖಿ ವ್ಯಕ್ತಿತ್ವ. ಸಮಾಜದ ಒಳಿತಿನಲ್ಲಿ ತಮ್ಮ ಬದುಕನ್ನು ಕಂಡು ಕೊಳ್ಳುವ ಇವರನ್ನು ಸಮಾಜ ಪ್ರೀತಿಸುತ್ತದೆ, ಗೌರವಿಸುತ್ತದೆ. ಅಲ್ಲಿ ಇವರ ನಾಲ್ಕು ಹೆಜ್ಜೆ ಗುರುತು ಮೂಡಿರುತ್ತದೆ. ಅಲ್ಲೇ ಇತಿಹಾಸ ಸೃಷ್ಟಿಯಾಗುತ್ತದೆ. ಡಾ|| ಎನ್.ಆರ್.ನಾಯಕರ ಬದುಕು ಅಂಥ ಘನತೆಯುಳ್ಳದ್ದು, ಹೊಳಪುಗೊಳ್ಳುವಂಥದ್ದು, ಮಾದರಿಯಾಗುವಂಥದ್ದು.

ಉತ್ತರ ಕನ್ನಡ ಜನಪದ ಸಾಹಿತ್ಯಕ್ಕೆ ಹೆಸರಾದ ಜಿಲ್ಲೆ. ವಿವಿಧ ಜನವರ್ಗದವರು ಇಲ್ಲಿ ಬಾಳಿಕೊಂಡು ಬಂದಿದ್ದಾರೆ. ವೈವಿಧ್ಯಮಯ ಸಾಹಿತ್ಯ–ಕಲೆ ಇಲ್ಲಿ ಅರಳಿಕೊಂಡು ಬಂದಿವೆ. ಈ ಸಂಪತ್ತನ್ನು ಉಳಿಸಿಕೊಳ್ಳುವುದಕ್ಕಾಗಿಯೇ ಇಡೀ ಬದುಕನ್ನು ಮುಡಿಪಾಗಿಟ್ಟವರು ಡಾ॥ ಎನ್.ಆರ್.ನಾಯಕರು. ಅವರು ಕವಿ, ನಾಟಕಕಾರ, ಪ್ರಕಾಶಕರೂ ಹೌದು; ಸಂಘಟಕ, ಸಮಾಜ ಚಿಂತಕ, ಕಾರ್ಯಸಾಧಕರೂ ಹೌದು; ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ಶಿಕ್ಷಣ ಕ್ಷೇತ್ರಕ್ಕೆ ಹೆಚ್ಚಿನ ಸೇವೆಸಲ್ಲಿಸಿದವರೂ ಹೌದು.

ಕುಟುಂಬ : ಡಾ॥ ಎನ್.ಆರ್.ನಾಯಕರ ಪೂರ್ಣ ಹೆಸರು ನಾರಾಯಣ ರಾಮ ನಾಯಕ. 1935ನೇ ಇಸ್ವಿ ಜೂನ್ 28 ರಂದು ಅವರು ಜನಿಸಿದರು. ಅಂಕೋಲ ತಾಲೂಕಿನ ಭಾವಿಕೇರಿ ಅವರ ಹುಟ್ಟೂರು. ತಂದೆ ರಾಮನಾಯಕರು; ತಾಯಿ ದೇವಮ್ಮ ನಾಯಕರು ಈ ದಂಪತಿಗಳಿಗೆ ಐದು ಮಂದಿ ಮಕ್ಕಳು; ಮೂರು ಗಂಡು, ಎರಡು ಹೆಣ್ಣು. ಡಾ॥ ನಾಯಕರು ಗಂಡು ಮಕ್ಕಳಲ್ಲಿ ಎರಡನೆಯ ಮಗ.

ಸ್ವಾತಂತ್ರ್ಯ ಚಳವಳಿ, ರೈತ ಚಳವಳಿಗೆ ಹೆಸರಾದ ನೆಲ ಉತ್ತರ ಕನ್ನಡದ ಅಂಕೋಲ. ಗಾಂಧೀಜಿ ಸಂಘಟಿತ ಉಪ್ಪಿನ ಸತ್ಯಾಗ್ರಹ ನಡೆಸಿದ ಕೀರ್ತಿ ಅದಕ್ಕಿದೆ. ಡಾ॥ ನಾಯಕರ ಕುಟುಂಬದವರು, ಚಳವಳಿಗಾರರಿಗೆ ಸಹಾಯಮಾಡಿ ತಮ್ಮ ದೇಶಪ್ರೇಮವನ್ನು ಹಸುರಾಗಿಸಿದವರು. ನೌಕರಿಯ ಗುಲಾಮತನ ಬೇಡವೆಂದರು. ದುಡಿಮೆಯಲ್ಲಿ ಸುಖಕಂಡರು. ತಾಯಿ ದೇವಮ್ಮ ನಾಯಕರು ವಂದಿಗೆಯವರು. ವಂದಿಗೆಯ ಜನರೆಲ್ಲ ವೀರಯೋಧರೆ. ಅಲ್ಲಿಯ ಮಣ್ಣ ಕಣಕಣಕ್ಕೂ ಸ್ವಾತಂತ್ರ್ಯದ ಹಂಬಲ. ಅವರು ಹುಟ್ಟಿ ಬೆಳೆದ ಇಡೀ ಕುಟುಂಬವೇ ಸ್ವಾಭಿಮಾನದ ಗಣಿಯಾಗಿತ್ತು. ದೊಡ್ಡಪ್ಪ ಚಿಕ್ಕಪ್ಪ, ಸೋದರಮಾವಂದಿರು, ಸೋದರರು– ಎಲ್ಲರೂ ತೊಟ್ಟದೀಕ್ಷೆ ಒಂದೇ; ದೇಶಭಕ್ತಿ. ಅನ್ಯಾಯದ ದಬ್ಬಾಳಿಕೆಯನ್ನು ವಿರೋಧಿಸಿದ

ದೇಶಭಕ್ತಿ ಚೈತನ್ಯಶೀಲರು ಈ ಜನ. ಡಾ|| ನಾಯಕರ ಬಾಲ್ಯಕ್ಕೆ ಸಿಕ್ಕ ಪ್ರಭಾವಳಿ ಇದು.

ವಿದ್ಯಾರ್ಥಿ ಜೀವನ : ಡಾ|| ನಾಯಕರ ಶಾಲಾ ಕಲಿಕೆ ಆರಂಭವಾದುದು 1941–42ರ ಸುಮಾರಿಗೆ. ಇದು ಸ್ವಾತಂತ್ರ್ಯ ಚಳವಳಿ ಬಿರುಸುಗೊಂಡ ಕಾಲ. 'ಭಾರತ ಬಿಟ್ಟು ತೊಲಗಿರಿ' ಚಳವಳಿ ಚುರುಕುಗೊಂಡುದು ಆವಾಗಲೆ. ಗಾಂಧೀಜಿಯವರು 'ಮಾಡು ಇಲ್ಲವೆ ಮಡಿ' ಎಂಬ ಕರೆ ಕೊಟ್ಟರು. ಈ ಕರೆಗೆ ಭಾರತೀಯರು ಓಗೊಟ್ಟರು. ಇನ್ನೊಂದು ಕಡೆ ಎರಡನೇ ಜಾಗತಿಕ ಮಹಾಯುದ್ಧ ತೀವ್ರಗತಿ ಹೊಂದಿತ್ತು. ಇವೆಲ್ಲ ಆವಾಗ ಮಕ್ಕಳಿಗೆ ಕತೆಗಳೇ ಆಗಿದ್ದವು. ದಕ್ಷ ದೇಶಾಭಿಮಾನಿ ಶಿಕ್ಷಕರು ಈ ಘಟನೆಗಳನ್ನೆಲ್ಲ ಹೇಳುತ್ತಿದ್ದರು. ಶಾಲೆಯಲ್ಲಿ ಮಕ್ಕಳಲ್ಲಿ ದೇಶಾಭಿಮಾನವನ್ನು ಉತ್ತೇಜಿಸುತ್ತಿದ್ದರು. ನಾರಾಯಣನಿಗೂ ಶಾಲೆಯಲ್ಲಿ ಅಂಥ ಶಿಕ್ಷಕರು ಇದ್ದರು. ಕರಿಯಣ್ಣ ಮಾಸ್ತರರು, ಪಟಗಾರ ಮಾಸ್ತರರು ಮೊದಲಾದವರು ಎಳೆಯ ಮನಸ್ಸಿನಲ್ಲಿ ಈ ಹಸುರನ್ನು ಬಿತ್ತುತ್ತಿದ್ದರು. ಆ ಪ್ರಭಾವ ನಾರಾಯಣನ ಮೇಲೂ ಆಗಿತ್ತು. ಹಿರಿಯರ ಸತ್ಯನಿಷ್ಠೆ, ಅನ್ಯಾಯದ ವಿರುದ್ಧ ಪ್ರತಿಭಟನೆ, ನ್ಯಾಯಕ್ಕಾಗಿ ಹೋರಾಟ–ಈ ಗುಣಗಳೆಲ್ಲ ಅವರಲ್ಲಿ ಮೊಳಕೆಯೊಡೆದದ್ದು ಆವಾಗಲೆ. ಕಲಿಕೆಯಲ್ಲಿ ಚುರುಕಾಗಿದ್ದ ಅವರು ಗುರುಗಳ ಪ್ರೀತಿಯ ವಿದ್ಯಾರ್ಥಿಯಾಗಿದ್ದರು. ಕೃಷಿಕ ಕುಟುಂಬದವರಾದುದರಿಂದ ಶಾಲೆಬಿಟ್ಟು ಮನೆಗೆ ಹೋದ ಮೇಲೆ ಹೊಲದ ಕೆಲಸ ಮಾಡಬೇಕಿತ್ತು. ಕೊಟ್ಟಿಗೆಯ ಕೆಲಸವೂ ಇರುತ್ತಿತ್ತು. ಮನೆಯಲ್ಲಿ ಹಿರಿಯರ ಕಟ್ಟುನಿಟ್ಟೂ ಇರುತ್ತಿತ್ತು. ನಾರಾಯಣ ಅವನ್ನೆಲ್ಲ ನಿಭಾಯಿಸುತ್ತಿದ್ದ. ಮನೆಯವರ ಪ್ರೀತಿಗೆ ಪಾತ್ರವಾಗಿದ್ದ.

ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೇಲೆ ಮುಂದಿನ ಓದಿಗೆ ಅವರು ಬಂದುದು ಅಂಕೋಲಕ್ಕೆ. ಅಲ್ಲಿ ಪೀಪಲ್ಸ್ ಹೈಸ್ಕೂಲು ಸೇರಿದರು. ಪ್ರಸಿದ್ಧ ಸಮಾಜ ಸುಧಾರಕ ಗಿರಿ ಪಿಕಳೆಯವರು ಆ ಪ್ರೌಢಶಾಲೆಯ

ಮುಖ್ಯೋಪಾಧ್ಯಾಯರಾಗಿದ್ದರು. ವಿ. ಬಿ. ಗಾಂವಕಾರರು, ಯು. ರಾಜಗೋಪಾಲಾಚಾರ್, ಎಂ.ಎಚ್ .ತಲಗೇರಿ, ಆರ್.ವಿ.ನಾರ್ವೇಕರ್, ಎಸ್.ಡಿ.ದೇಸಾಯಿಯವರಂಥ ಅಧ್ಯಯನಶೀಲ ಆದರ್ಶ ಶಿಕ್ಷಕರು ಅಲ್ಲಿದ್ದರು. ಪಠ್ಯಗಳ ಜೊತೆಗೆ ಮಕ್ಕಳ ಪ್ರತಿಭೆ ಮತ್ತು ವ್ಯಕ್ತಿತ್ವ ವಿಕಸನಕ್ಕೆ ಪೂರಕವಾದ ಚಟುವಟಿಕೆಗಳಿಗೆ ಅಲ್ಲಿ ಗಮನ ಕೊಡಲಾಗುತ್ತಿತ್ತು. ಇದರಿಂದ ಡಾ॥ ನಾಯಕರಿಗೆ ತುಂಬಾ ಪ್ರಯೋಜನವಾಯಿತು. ಅವರಿಗೆ ಕವನ ರಚನೆಗೆ ಮೊದಲ ಸ್ಫೂರ್ತಿ ಸಿಕ್ಕಿದ್ದೆ ಈ ಶಾಲೆಯಲ್ಲಿ. ಸಾಹಿತ್ಯ, ನಾಟಕ, ಕಲಾಭಿರುಚಿಗೆ ಅವರಿಗೆ ಹೆಚ್ಚಿನ ಪೋಷಕಾಂಶ ಸಿಕ್ಕಿದ್ದು ಕೂಡ ಇದೇ ಅವಧಿಯಲ್ಲಿ.

ಆಗ ಅಂಕೋಲೆಯಲ್ಲಿ ಕರ್ನಾಟಕ ಸಂಘ ಅಸ್ತಿತ್ವಕ್ಕೆ ಬಂದಿತ್ತು. ಸಾಂಸ್ಕೃತಿಕ ಚಟುವಟಿಕೆಗಳು ಚೆನ್ನಾಗಿಯೇ ನಡೆಯುತ್ತಿದ್ದವು. ನಾಡಹಬ್ಬವನ್ನು ಸಂಭ್ರಮದಿಂದ ಆಚರಿಸುತ್ತಿದ್ದರು. ದ.ರಾ.ಬೇಂದ್ರೆ, ಎಂ.ಆರ್. ಶ್ರೀನಿವಾಸ ಮೂರ್ತಿ, ತೀ.ನಂ. ಶ್ರೀಕಂಠಯ್ಯ, ವಿ.ಕೃ.ಗೋಕಾಕ್, ಗೋಪಾಲಕೃಷ್ಣ ಅಡಿಗ ಮೊದಲಾದ ಹಿರಿಯ ಸಾಹಿತಿಗಳೆಲ್ಲ ಈ ಸಂಘದ ಮೂಲಕ ಅಂಕೋಲೆಗೆ ಬರುತ್ತಿದ್ದರು. ಕನ್ನಡ 'ಗದಾಯುದ್ಧ'ದ ಕುರಿತು ಎಂ. ಆರ್. ಶ್ರೀನಿವಾಸ ಮೂರ್ತಿಯವರು ಮಾಡಿದ ಭಾಷಣ ನಾಯಕ ಅವರ ಮೇಲೆ ಅಗಾಧ ಪ್ರಭಾವ ಬೀರಿತಂತೆ. ತಾನೂ ರನ್ನನ ಬಗ್ಗೆ ಹಾಗೆಯೇ ಮಾತಾಡಬೇಕು ಎಂದು ಉತ್ತೇಜಿತರಾದರಂತೆ. ನಾಯಕರನ್ನು ರೂಪಿಸುವಲ್ಲಿ ಈ ಕರ್ಣಾಟಕ ಸಂಘದ ಪಾತ್ರವೂ ದೊಡ್ಡದೆ.

ಅನ್ಯಾಯವನ್ನು ಕಂಡರೆ ಸೆಟೆದು ನಿಲ್ಲುವ ಸ್ವಭಾವ ನಾಯಕರದ್ದು. ಈ ಶಾಲೆಯಲ್ಲಿ ಓದುತ್ತಿರುವಾಗಲೇ ಅದು ಹೊರಹೊಮ್ಮಿದೆ.

ಪ್ರೌಢಶಾಲೆಗೆ ಬಂದಾಗ ಅವರಿಗೆ ಕಠಿನವೆನಿಸಿದ ವಿಷಯ ಇಂಗ್ಲಿಷ್. ಸ್ವಾತಂತ್ರ್ಯಕ್ಕಾಗಿ ಆಂಗ್ಲರ ವಿರುದ್ಧ ಚಳವಳಿ ನಡೆಯುತ್ತಿದ್ದ ಸಂದರ್ಭವದು. ಅವರ ಭಾಷೆಯ ಮೇಲೂ ಒಂದು ವಿಧದ ತಿರಸ್ಕಾರ ನಾಯಕ ಅವರಿಗೆ

ಮೂಡಿತ್ತು. ಹೆಚ್ಚಿಗೆ ಏನು? ಅವರ ಭಾಷೆಯನ್ನು ತಿರಸ್ಕಾರವಾಗಿ ಕಾಣುವುದೂ ಅದನ್ನು ದೂರವಿಡುವುದೂ ಸ್ವಾತಂತ್ರ್ಯ ಚಳವಳಿಯ ಒಂದು ಅಂಶವೇ ಎಂಬ ಮನೋಭಾವ ಅವರಲ್ಲಿತ್ತು.

ಡಾ॥ ನಾಯಕರು ವಿದ್ಯಾರ್ಥಿ ದೆಸೆಯಲ್ಲೆ ಒಳ್ಳೆ ಮಾತುಗಾರರಾಗಿದ್ದರು. ಭಾಷಣ ಸ್ಪರ್ಧೆಯಲ್ಲಿ ಇವರದ್ದೆ ಮೇಲುಗೈ. ಎಂಟನೆಯ ತರಗತಿಯಲ್ಲಿರುವಾಗ ವಾರ್ಷಿಕೋತ್ಸವದ ಅಂಗವಾಗಿ ಪ್ರತಿಭಾ ಸ್ಪರ್ಧೆಗಳಿದ್ದವು. ಭಾಷಣ ಸ್ಪರ್ಧೆಯಲ್ಲಿ ಇವರೇ ಪ್ರಥಮ. ಆ ಸಮಾರಂಭಕ್ಕೆ ಅತಿಥಿಗಳಾಗಿ ಆಗಮಿಸಿದವರು ಗೌರವಾನ್ವಿತ ಸ.ಪ.ಗಾಂವಕಾರರು; ಮುಂಬೈ ಪ್ರಾಂತ್ಯಕ್ಕೆ ಉಪಮಂತ್ರಿಯಾಗಿದ್ದವರು ಅವರು. ಅಂದು ಬಂದ ಬಹುಮಾನ ಮಾಸ್ತಿಯವರ ಸಣ್ಣಕಥೆಗಳ ಸಂಗ್ರಹ. ಬಹುಮಾನ ನೀಡಿದವರೂ ದೊಡ್ಡ ವ್ಯಕ್ತಿ. ಬಹುಮಾನ ಕೊಟ್ಟ ಪುಸ್ತಕವೂ ದೊಡ್ಡ ಸಾಹಿತಿಗಳದ್ದೆ. ತನಗೆ ಸ್ಫೂರ್ತಿ ನೀಡಿದ ಸಂದರ್ಭ ಅದು; ತನ್ನ ಬಾಲ್ಯದ ಅವಿಸ್ಮರಣೀಯ ಘಟನೆ ಎಂಬುದಾಗಿ ಡಾ॥ ನಾಯಕರು ಹೇಳಿಕೊಂಡಿದ್ದಾರೆ.

ಮಗ ನಾರಾಯಣ ಎಸ್.ಎಸ್.ಸಿ. ಪಾಸಾದುದು ರಾಮನಾಯಕ ದಂಪತಿಗಳಿಗೆ ಹೆಮ್ಮೆ ತಂದಿತು. ಮುಂದೇನು ಮಾಡುವುದು? ಅವನ ಸರೀಕರೆಲ್ಲ ಕೆಲವರು ಕಾಲೇಜಿಗೆ ಹೋಗುವ ನಿರ್ಧಾರ ಮಾಡಿದ್ದರು. ನಾರಾಯಣನಿಗೆ ಕಾಲೇಜು ಓದಬೇಕೆಂಬ ಆಸೆ. ಆದರೆ ರಾಮನಾಯಕರಿಗೆ ಅದು ಸಲೀಸು ಆಗಿರಲಿಲ್ಲ. ಆರ್ಥಿಕವಾಗಿ ಅವರು ಬಡವರಲ್ಲದಿದ್ದರೂ ಶ್ರೀಮಂತರೇನೂ ಅಲ್ಲ. 'ಹಾಸಿಗೆ ಇದ್ದಷ್ಟು ಕಾಲುಚಾಚು' ಎಂಬ ಲೆಕ್ಕದವರು ಅವರು. ಯಾರೋ ಹೇಳಿದ ಪ್ರಕಾರ ಮಕ್ಕಳನ್ನು ಕಾಲೇಜು ಓದಿಸಬೇಕಾದರೆ ತುಂಬಾ ಹಣ ಸುರಿಬೇಕು. ಸಾವಿರಾರು ರೂಪಾಯಿ ವರ್ಷಕ್ಕೆ ಖರ್ಚು ಬರುತ್ತದೆ. ತನ್ನ ಆದಾಯ ಅದಕ್ಕೆಲ್ಲಿ ಸಾಕಾಗುತ್ತದೆ? ಮಗನ ಕಲಿಕೆ ಇಷ್ಟೇ ಸಾಕು. ಕೃಷಿ ಇದೆ. ಹಾಗೂ ಮನೆ ನೋಡಿಕೊಳ್ಳಬೇಕು. ಹೀಗೆ ಲೆಕ್ಕಚಾರ ಹಾಕಿ ಕಾಲೇಜಿಗೆ ಬೇಡ ಅಂದರು. ನಾರಾಯಣನಿಗೆ ಈ

ಮಾತು ನುಂಗಲಾರದ ತುತ್ತಾಯಿತು. ಇನ್ನು ಸುಮ್ಮನಿದ್ದರೆ ತನ್ನ ಓದು ಕೆಡುತ್ತದೆ ಎಂದು ಯೋಚಿಸಿದ. ತಂದೆಯನ್ನು ಒಪ್ಪಿಸುವುದಕ್ಕೆ ಮಾರ್ಗ ಕಂಡುಕೊಂಡ. ಗಾಂಧೀಜಿ ಹೇಳಿ ಕೊಟ್ಟ ಮಾರ್ಗ : ಉಪವಾಸ ಸತ್ಯಾಗ್ರಹ.

ಊರ ಬಂಡಿ ಹಬ್ಬ. ಮನೆಯೆಲ್ಲ ಹಬ್ಬದ ಸಂಭ್ರಮದಲ್ಲಿದೆ. ನಾರಾಯಣ ಮಾತ್ರ ಈ ಸಂಭ್ರಮದಲ್ಲಿ ಪಾಲ್ಗೊಳ್ಳಲಿಲ್ಲ. ಬೆಳಗಿನಿಂದಲೇ ಉಪವಾಸ ಶುರುಮಾಡಿದ. ಯಾರು ಬಂದು ಕರೆದರೂ ಊಟ ಆಸರೆಗೆ ಹೋಗಲಿಲ್ಲ. ರಾತ್ರಿ ಊಟಕ್ಕೆ ಮೊದಲು, ಬಂದ ನೆಂಟರ ಮುಂದೆ ಈ ಕುರಿತು ಚರ್ಚೆ ನಡೆಯಿತು. ತಾವು ಅಂದುಕೊಂಡಷ್ಟು ಖರ್ಚು ಹೇರುವುದಿಲ್ಲ ಎಂಬ ಭರವಸೆ ಮಗನಿಂದ ಬಂದಿತು. ತಂದೆ–ಮಗನಲ್ಲಿ ನಡೆದ ಒಪ್ಪಂದದಿಂದ ತಾಯಿಯ ಮನಸ್ಸು ಹಗುರವಾಯಿತು. ಹಬ್ಬದೂಟದೊಂದಿಗೆ ನಾರಾಯಣನ ಉಪವಾಸ ಮುಗಿಯಿತು.

–ಕಾಲೇಜು ಮೆಟ್ಟಿಲು ಹತ್ತಲು ಡಾ॥ ನಾಯಕರು ಪಟ್ಟ ಕಷ್ಟ ಇದು. ಅವರ ಉತ್ಕಟವಾದ ವಿದ್ಯಾಕಾಂಕ್ಷೆಗೆ ಈ ಘಟನೆ ನಿದರ್ಶನ.

ಕುಮಟಾ ಕೆನರಾ ಕಾಲೇಜಿನಲ್ಲಿ ಪ್ರವೇಶ ಪಡೆದರು. (ಈಗ ಅದು ಡಾ.ಎ.ವಿ.ಬಾಳಿಗ ಕಾಲೇಜು ಎಂದು ಹೆಸರಾಗಿದೆ) ಕಲಾ ವಿಭಾಗವನ್ನು ಆಯ್ದುಕೊಂಡರು.

ಕಾಲೇಜು, ಸೇರಿದ ಮೊದಲ ವರ್ಷ ನಡೆದ ಒಂದು ಘಟನೆ ಇಲ್ಲಿ ಉಲ್ಲೇಖನೀಯ. ಅದು ಸಂಕೇತವೂ ಹೌದು. ಪಕ್ಕದ ಕೋಣೆಯಲ್ಲಿದ್ದ ವರದರಾಜನಿಗೆ ನಾಯಕರು ತಿಳಗುಳ ನೀಡಿದರು. ಅದನ್ನು ತೆಗೆದುಕೊಂಡ ವರದರಾಜ. ನಾಯಕರು ತಮ್ಮ ಕೋಣೆಗೆ ತಿರುಗಿದರು. ಕೂಡಲೆ "ಈ ಶೂದ್ರ ಕೊಟ್ಟಿದ್ದು ನಾನು ತಿನ್ನಬೇಕೆ?" ಎಂದ. ನಾಯಕರು ಕೊಟ್ಟ ತಿಳಗುಳವನ್ನು ಹೊರಗೆ ಬಿಸಾಡಿಸಿದ. ಅವನ ಮಾತು ಇವರ ಕಿವಿಗೆ ಬಿತ್ತು. ಕೆರಳಿ ಕೆಂಡವಾದರು. "ಯಾರನ್ನು ಶೂದ್ರನೆಂದೆ" ಎಂದು

ಗುಡುಗಿದರು. ಆತ ಹೆದರಿ ಹೊರಗೋಡಿದನಂತೆ. ಬ್ರಾಹ್ಮಣ ಶ್ರೇಷ್ಠ, ಶೂದ್ರ ಕನಿಷ್ಠ ಎಂಬ ಅಮಾನವೀಯ ನೀತಿಗೆ ನಾಯಕರು ಅಂದು ತೋರಿದ ಪ್ರತಿಕ್ರಿಯೆ ಅದು.

ಉತ್ತಮ ಪ್ರಾಧ್ಯಾಪಕ ವರ್ಗ ಈ ಕಾಲೇಜಿನಲ್ಲಿತ್ತು. ಕೇ.ಜಿ.ಶಾಸ್ತ್ರಿ, ಜಿ.ಎಸ್. ಅಮೂರ್, ಬಿ.ಹೆಚ್. ಶ್ರೀಧರ್, ಡಾ.ಕೆ.ಕೃಷ್ಣಮೂರ್ತಿಯಂಥವರ ಸಾಮೀಪ್ಯ ಇಲ್ಲಿ ಸಿಕ್ಕಿತು. ನಾಯಕರ ಸಾಹಿತ್ಯ ಆಸಕ್ತಿಗೆ ಗರಿ ಮೂಡಿತು.

ಅಂತಿಮ ಬಿ.ಎ.ಯಲ್ಲಿರುವಾಗ ಕಾಲೇಜಿನ ಯೂನಿಯನ್ ಸೆಕ್ರೆಟರಿಯಾಗಿ ಆಯ್ಕೆಯಾದರು. ಕಾಲೇಜಿನ ಚಟುವಟಿಕೆಗಳನ್ನು ಉತ್ಸಾಹದಿಂದ ಮತ್ತು ಮುತುವರ್ಜಿಯಿಂದ ನಿರ್ವಹಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡರು. ನಿಯತ್ತಾಗಿ ನಡೆದುಕೊಂಡು ಆದರ್ಶಕ್ಕೆ ಗೌರವ ತಂದರು.

1960ರಲ್ಲಿ ಡಾ.ನಾಯಕರ ಪದವಿ ಶಿಕ್ಷಣ ಮುಗಿಯಿತು. ಶಿಕ್ಷಕ ತರಬೇತಿ ಪಡೆದು ಪ್ರೌಢಶಾಲೆಯಲ್ಲಿ ಶಿಕ್ಷಕರಾಗಬೇಕು ಎಂಬುದು ಅವರ ಇಚ್ಛೆಯಾಗಿತ್ತು. ಆಗ ಬಿ.ಎಡ್. ಕಾಲೇಜು ಇದ್ದುದು ಬೆಳಗಾವಿಯಲ್ಲಿ. ಪ್ರವೇಶಕ್ಕಾಗಿ ಅರ್ಜಿಸಲ್ಲಿಸಿದರು. ಆದರೆ ಆ ವರ್ಷ ಅವಕಾಶ ಸಿಗಲಿಲ್ಲ. ಕೊನೆಗೆ ಎಂ.ಎ. ಮಾಡುವುದೆಂದು ನಿರ್ಧಾರ ಮಾಡಿದರು. ಧಾರವಾಡಕ್ಕೆ ಬಂದು ಕರ್ನಾಟಕ ವಿಶ್ವವಿದ್ಯಾನಿಲಯವನ್ನು ಸೇರಿದರು. ಕನ್ನಡವನ್ನೇ ಅಧ್ಯಯನ ವಿಷಯವಾಗಿ ತೆಗೆದುಕೊಂಡರು. ಕನ್ನಡದ ಪ್ರಸಿದ್ಧ ವಿದ್ವಾಂಸರುಗಳಾದ ಡಾ.ಆರ್.ಸಿ.ಹಿರೇಮಠ, ಡಾ.ಎಮ್.ಎಸ್.ಸುಂಕಾಪುರ, ಬಿ.ಎಸ್.ಕುಲಕರ್ಣಿ, ವೃಷಭೇಂದ್ರ ಸ್ವಾಮಿಯಲ್ಲಿ ಡಾ.ನಾಯಕರು ಚೆನ್ನಾಗಿ ಪಳಗಿದರು. ಸಾಹಿತ್ಯದ ಗಂಭೀರ ಅಧ್ಯಯನಕ್ಕೆ ತೊಡಗಿದ್ದು ಆವಾಗಲೆ. ವಾರಕ್ಕೊಮ್ಮೆ ನಡೆವ ಸೆಮಿನಾರ್ ಡಾ.ನಾಯಕರ ಪ್ರತಿಭೆಗೆ ಸಾಣೆಹಿಡಿಯಿತು. ಚರ್ಚೆಯಲ್ಲಿ ನಾಯಕರ ವಾದ ವೈಖರಿ ಆಕರ್ಷಕವಾಗಿರುತ್ತಿತ್ತು. ಸ್ವಲ್ಪ ಆವೇಶವುಳ್ಳವರಾಗಿ ವೇದಿಕೆಯ ಮೇಲೆ ಮಿಂಚುತ್ತಿದ್ದರು. ಖಂಡು ತುಂಡು

ಮಾತು. ಅವರ ವಾದ ಸರಣಿಯನ್ನು , ಪ್ರತಿಪಾದನ ವಿಧಾನವನ್ನು ಕಂಡು ಅವರ ಪ್ರಾಧ್ಯಾಪಕರು, ಸಹಪಾಠಿಗಳು ಅವರನ್ನು 'ಸೆಮಿನಾರ್ ವಿಶ್ವಾಮಿತ್ರ' ಎಂದು ಕರೆಯುತ್ತಿದ್ದರು. ಸದಾ ಅಧ್ಯಯನದಲ್ಲಿ ನಿರತರಾಗಿರುತ್ತಿದ್ದ ಡಾ.ನಾಯಕರು ಇಲ್ಲಿ ಪಡೆದ ಅನುಭವ ಅಪಾರ. 1963ರಲ್ಲಿ ಎಂ.ಎ. ಪಾಸು ಮಾಡಿ ಸ್ನಾತಕೋತ್ತರ ಪದವಿ ಪಡೆದರು. 1969ರಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಅದೇ ವಿಶ್ವವಿದ್ಯಾನಿಲಯದಲ್ಲಿ ಹೆಸರು ನೊಂದಾವಣೆ ಮಾಡಿದರು. 'ಕಾರವಾರ ಜಿಲ್ಲೆಯ ಜನಪದ ಗೀತೆಗಳು' ಎಂಬ ವಿಷಯದ ಮೇಲೆ ಸಂಶೋಧನೆ ಮಾಡಿ 1975ರಲ್ಲಿ ಪಿಹೆಚ್.ಡಿ ಪದವಿಯನ್ನೂ ಪಡೆದರು.

ಒಬ್ಬ ಹಳ್ಳಿಯ ಹುಡುಗ ಪಿಹೆಚ್.ಡಿ. ಎತ್ತರಕ್ಕೇರಿದ್ದೇನೋ ಸಾಮಾನ್ಯ ಸಾಧನೆ ಅಲ್ಲ. ದೃಢಸಂಕಲ್ಪ ಮತ್ತು ಪ್ರಯತ್ನವಿದ್ದರೆ ಯಶಸ್ಸಿಗೇನೂ ಕೊರತೆಯಿಲ್ಲ. ಇದಕ್ಕೆ ಡಾ.ನಾಯಕರ ವಿದ್ಯಾರ್ಥಿ ಜೀವನವೇ ಸ್ಪಷ್ಟ ನಿದರ್ಶನ.

ವೃತ್ತಿ ಜೀವನ : ವಿದ್ಯಾರ್ಥಿ ಜೀವನದ ಯಶಸ್ಸು ಭವಿಷ್ಯವನ್ನು ನಿರ್ಧರಿಸುತ್ತದೆ. ಕಲಿಕೆ ಸಫಲವಾದರೆ ಬದುಕಿಗೆ ಭರವಸೆ ಸಿಕ್ಕಂತಾಗುತ್ತದೆ. ವಿದ್ಯಾರ್ಜನೆಯ ದಾರಿಯಲ್ಲಿ ಡಾ.ನಾಯಕರು ದಿಟ್ಟತನದಿಂದಲೇ ಹೆಜ್ಜೆ ಇಟ್ಟವರು. ಹಂಗಿಲ್ಲದ ಬದುಕಿಗೆ ಧೈರ್ಯವಾಗಿರಬೇಕು ಎಂದು ಅಂದುಕೊಂಡವರು. ಅವರು ಪ್ರೀತಿಸಿದ್ದು ಅಧ್ಯಾಪಕ ವೃತ್ತಿ. ಇದು ಅವರಿಗೆ ಕೇವಲ ಜೀವನೋಪಾಯ ಅಂತಲ್ಲ. ಜ್ಞಾನಸಾಗರದಲ್ಲಿ ಈಜಾಡಲು ಇಲ್ಲಿ ಸುವರ್ಣಾವಕಾಶ. ಕಲಿಸಿ, ಕಲಿವ ರುಚಿಯೇ ಬೇರೆ. ಸಿಗುವ ಆನಂದವೇ ಬೇರೆ. ಅವರ ಕನಸು-ಮನಸ್ಸೆಲ್ಲ ಅದೇ ಆಗಿತ್ತು.

ಡಿಗ್ರಿ ಮುಗಿದ ಕೂಡಲೇ ಶಿಕ್ಷಕಿ ವೃತ್ತಿ ಅವರನ್ನು ಕೈಬೀಸಿ ಕರೆಯಿತು. ಚೆಂಡಿಯಾದ 'ದಿ ಪೊಪ್ಯೂಲರ್ ನ್ಯೂ ಇಂಗ್ಲಿಷ್ ಸ್ಕೂಲ್' ನಲ್ಲಿ ಶಿಕ್ಷಕರಾಗಿ ಸೇರಿದರು. ಕನ್ನಡ, ಇಂಗ್ಲಿಷ್, ಸಂಸ್ಕೃತ ಪಾಠ ಕಲಿಸುವ ಹೊಣೆ ಅವರಿಗೆ

ಇಲ್ಲಿ ಇದ್ದುದು ಸ್ವಲ್ಪ ಸಮಯ ಮಾತ್ರ. ತಮ್ಮ ಮುಂದಿನ ಶಿಕ್ಷಣಕ್ಕಾಗಿ ಆ ಶಾಲೆಯನ್ನು ಬಿಡಬೇಕಾಯಿತು. ಆದರೆ ತಮ್ಮ ಪಾಲಿಗೆ ಇದು ಅವಿಸ್ಮರಣೀಯ ಸಮಯ ಅಂದಿದ್ದಾರೆ. ಡಾ.ನಾಯಕರ ಉಪನ್ಯಾಸಕ ವೃತ್ತಿ ಜೀವನ ಆರಂಭವಾದುದು ಹೊನ್ನಾವರದಲ್ಲಿ. 1964ರಲ್ಲಿ, ಎಂ.ಪಿ.ಇಸ್.ಎಸ್. ಕಾಲೇಜಿನಲ್ಲಿ. (ಅದೀಗ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಎಂಬುದಾಗಿ ನಾಮಾಂತರಗೊಂಡಿದೆ.) ಕನ್ನಡ ಉಪವ್ಯಾಸಕರಾಗಿ ಕಾಲೇಜನ್ನು ಪ್ರವೇಶಿಸಿದರು. ಮುಂದೆ ರೀಡರ್ ಆಗಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. 1984ರಿಂದ ಪ್ರಾಂಶುಪಾಲರಾಗಿ ಕಾಲೇಜನ್ನು ಮುನ್ನಡೆಸಿದರು. 1993, ಜೂನ್ 30ರ ವರೆಗೆ ಕಾರ್ಯಭಾರ ಹೊತ್ತರು. ಈ ಅವಧಿಯಲ್ಲಿ ಕಾಲೇಜಿಗೆ ಅವರು ಸಲ್ಲಿಸಿದ ಸೇವೆ ಅವಿಸ್ಮರಣೀಯವಾದುದು.

ಡಾ. ನಾಯಕರದ್ದು ಎತ್ತರ ನಿಲುವು. ಎತ್ತರಕ್ಕೆ ಹದವಾದ ದಪ್ಪ. ಮುಖದಲ್ಲಿ ಎದ್ದು ಕಾಣುವ ಮೂಗು. ಹರವಾದ ಹಣೆ. ಆತ್ಮವಿಶ್ವಾಸ, ಸ್ವಾಭಿಮಾನ ತುಂಬಿ ತುಳುಕುವ ತುಂಬುಮೊಗ. ಸೆಳೆಮಿಂಚಿನ ದೃಷ್ಟಿ, ಅಲ್ಲಿ ಹೊಸತನ್ನು ಕಾಣುವ ಭಾವ. ಓರಣವಾಗಿ ಬಾಚಿದ ಕ್ರಾಪು. ನಕ್ಕರೆ ನಗೆಯಲ್ಲಿ ಉಕ್ಕುವ ನಿಷ್ಕಲ್ಮಷ ಭಾವ. ಏರುಧ್ವನಿ. ಒಟ್ಟು ಕಾರ್ಯಸಾಧನೆಯ ದಿಟ್ಟತನ. ಕಾಲೇಜು ಪ್ರಾಧ್ಯಾಪಕತ್ವಕ್ಕೆ ಒಪ್ಪುವ ಹೇಳಿ ಮಾಡಿಸಿದಂತಿರುವ ವ್ಯಕ್ತಿತ್ವ. ಡ್ರೆಸ್ ಕೂಡ ಹಾಗೆಯೇ. ನಲುಗು ನೆರಿಗೆ ಇಲ್ಲ. ಇಸ್ತ್ರಿಗೆ ಆಜ್ಞೆ ಮಾಡಿದಂತೆ– ಗಳಿಗೆ ಆಚೆಈಚೆ ಆಗುತ್ತಿರಲಿಲ್ಲ. ಒಪ್ಪು ಓರಣದ ನಡುವೆ ನಾಯಕರಿಗೆ ಅದು ತೋರಣವೆ.

ಡಾ. ನಾಯಕರ ಪಾಠವೆಂದರೆ ವಿದ್ಯಾರ್ಥಿಗಳಿಗೆ ರಸದೌತಣ. ತರಗತಿಗೆ ಪ್ರವೇಶಿಸಿದರೆ ಸಾಕು. ಎಲ್ಲರೂ ಗಂಭೀರ. ಹದಿಹರೆಯದ ಕುಚೇಷ್ಟೆಗೆ ಅಲ್ಲಿ ಅವಕಾಶವಿಲ್ಲ. ಇದು ಹೆದರಿಕೆ ಅಲ್ಲ. ಗುರುಗಳ ಮುಂದೆ ಗೌರವದಿಂದ ನಡೆದುಕೊಳ್ಳಬೇಕು ಎಂಬ ಅರಿವು; ಕನ್ನಡದ ಪ್ರೀತಿ.

ಕನ್ನಡ ಭಾಷೆ–ಸಾಹಿತ್ಯವೆಂದರೆ ಡಾ.ನಾಯಕರಿಗೆ ಪ್ರಾಣ; ತ್ರಾಣ, ಮಾಡುವ ಪಾಠದ ಮೇಲೆ ಮೊದಲು ಪ್ರೀತಿ. ಅಲ್ಲಿಯ ಭಾವನೆಗಳನ್ನು ಸ್ವತಃ ಅನುಭವಿಸಿ ಅದನ್ನು ವಿದ್ಯಾರ್ಥಿಗಳಿಗೆ ವರ್ಗಾಯಿಸುತ್ತಿದ್ದರು. ಅವರೊಳಗಿನ ತನ್ಮಯತೆ ವಿದ್ಯಾರ್ಥಿಗಳನ್ನೂ ಆವರಿಸಿಬಿಡುತ್ತಿತ್ತು. ರಸಭಾವಕ್ಕೆ ತಕ್ಕಂತೆ ಧ್ವನಿಯ ಏರಿಳಿತ. ಸೋಲದ ಸ್ವರ. ಕಂಚಿನ ಕಂಠ. ರನ್ನನ ಗದಾಯುದ್ಧದ ಭೀಮ–ಕೌರವರು; ರಾಘವಾಂಕನ ಹರಿಶ್ಚಂದ್ರ ಕಾವ್ಯದ ವಿಶ್ವಾಮಿತ್ರ, ಹರಿಶ್ಚಂದ್ರ–ಚಂದ್ರಮತಿಯರು; ಕುಮಾರವ್ಯಾಸಭಾರತದ ಉದ್ಯೋಗ ಪರ್ವದ ದ್ರೌಪದಿ, ಭೀಮ, ಕರ್ಣರು, ದ್ರೋಣ ಪರ್ವದ ಅಭಿಮನ್ಯು, ಕರ್ಣ ಪರ್ವದ ಕರ್ಣ– ಇವರೆಲ್ಲ ವಿದ್ಯಾರ್ಥಿಗಳ ಮುಂದೆ ಮತ್ತೊಮ್ಮೆ ಎದ್ದುಬರುತ್ತಿದ್ದರು. ತರಗತಿಯಲ್ಲಿ ತ್ರೇತಾಯುಗ, ದ್ವಾಪರಯುಗಗಳು ಅವತರಿಸುತ್ತಿದ್ದವು. ಒಂದು ಗಂಟೆಯ ಅವಧಿ ಕಳೆದುದೇ ಗೊತ್ತಾಗುತ್ತಿರಲಿಲ್ಲ. ತಾವೇ ಆ ಪಾತ್ರಗಳಾಗಿ ಡಾ. ನಾಯಕರು ಮಾತಾಡುತ್ತಿದ್ದರು. ಈ ಪಾಠ ವೈಭವವನ್ನು, ರಸಸುಖವನ್ನು ಈಗಲೂ ನೆನಪಿಸಿಕೊಳ್ಳುವ ವಿದ್ಯಾರ್ಥಿಗಳು ಅದೆಷ್ಟೋ ಮಂದಿ ಇದ್ದಾರೆ. ವ್ಯಾಕರಣ, ಛಂದಸ್ಸು, ಅಲಂಕಾರಗಳಂಥ ವಿಷಯಗಳು ವಿದ್ಯಾರ್ಥಿಗಳಿಗೆ ಕ್ಲಿಷ್ಟವೆ. ಆದರೆ ನಾಯಕರ ಪಾಠ ಕೇಳಿದಮೇಲೆ ಕಷ್ಟವಾಗುತ್ತಿರಲಿಲ್ಲ. ಶಬ್ದ ಮಣಿ ದರ್ಪಣ, ಭಾಷಾಶಾಸ್ತ್ರ, ಕನ್ನಡ ಕೈಪಿಡಿ–ಇವುಗಳ ಪಾಠಗಳೂ ರಸವತ್ತಾಗಿಯೇ ಇರುತ್ತಿದ್ದವು. ಕಾವ್ಯಮೀಮಾಂಸೆಯ ಚರ್ಚೆಯೂ ಆಕರ್ಷಕವಾಗಿರುತ್ತಿತ್ತು. ಹೊಸಗನ್ನಡ ಪಾಠಗಳೂ ವಿಚಾರ ಪ್ರಚೋದಕವಾಗಿರುತ್ತಿದ್ದವು. ಸಾಹಿತ್ಯಲೋಕದ ಅಪೂರ್ವ ಅನುಭವಗಳನ್ನು ಅವರು ನೀಡುತ್ತಿದ್ದರು. ಈ ಪಾಠಸ್ಪರ್ಶದಿಂದ ಚೇತನಗೊಂಡ ವಿದ್ಯಾರ್ಥಿಗಳ ಸಂಖ್ಯೆಯೂ ದೊಡ್ಡದೆ ಆಗಿದೆ.

ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿಯನ್ನು ಭಾಷಾಪ್ರೇಮವನ್ನು ಬೆಳೆಸಿದರು. ಹೆಚ್ಚಿನ ಮುತುವರ್ಜಿ ವಹಿಸಿದರು. ಪಾಠದ ಹೊರತಾಗಿ

ಪಾಠೇತರ ಚಟುವಟಿಕೆಗಳನ್ನು ರೂಪಿಸಿದರು. ಕನ್ನಡ ಮೇಜರ್ ವಿಷಯವಾಗಿ ಕಾಲೇಜಿನಲ್ಲಿ ಪ್ರಾಧಾನ್ಯ ಪಡೆದಿತ್ತು. ಕನ್ನಡ ವಿಭಾಗಕ್ಕೆ ಮುಖ್ಯಸ್ಥರೆ ಡಾ. ನಾಯಕರಾಗಿದ್ದರು. ಕನ್ನಡ ಅಧ್ಯಯನ ಪ್ರೌಢವಾಗಿ ನಡೆಯಬೇಕು ಎಂಬ ಕಳಕಳಿ ಇವರಿಗಿತ್ತು. ಆದುದರಿಂದ ಕಾಲೇಜಿನಲ್ಲಿ ಕನ್ನಡ ಸಂಘವನ್ನು ಸ್ಥಾಪಿಸಿದರು. ಕನ್ನಡ ಮೇಜರ್ ವಿದ್ಯಾರ್ಥಿಗಳನ್ನು ಸಂಘದ ಚಟುವಟಿಕೆಯಲ್ಲಿ ತೊಡಗಿಸಿದರು. ಅದರ ಅಧ್ಯಕ್ಷರಾಗಿ ತಾವಿದ್ದುಕೊಂಡು ಮಾರ್ಗದರ್ಶನ ಮಾಡುತ್ತಿದ್ದರು. ಪ್ರತಿ ತಿಂಗಳಿಗೊಮ್ಮೆ ವಿಚಾರ ಸಂಕಿರಣ (ಸೆಮಿನಾರ್) ನಡೆಯುತ್ತಿತ್ತು. ವಿದ್ಯಾರ್ಥಿಗಳಿಗೆ ತಾವು ಅಧ್ಯಯನ ಮಾಡುವ ವಿಷಯಗಳ ಮೇಲೆ ಟೊಪಿಕ್ ಕೊಡುತ್ತಿದ್ದರು. ಬೇರೆ ಬೇರೆ ಆಕರಗ್ರಂಥಗಳನ್ನು ತಾವು ಅಧ್ಯಯನ ಮಾಡಿ ವಿದ್ಯಾರ್ಥಿಗಳು ಪ್ರಬಂಧ ಸಿದ್ಧ ಪಡಿಸುತ್ತಿದ್ದರು. ಒಂದು ವಿಚಾರ ಸಂಕಿರಣದಲ್ಲಿ ಎರಡು ಪ್ರಬಂಧ ಮಂಡನೆ. ಅನಂತರ ಅವುಗಳ ಮೇಲೆ ಚರ್ಚೆ. ಕೊನೆಯಲ್ಲಿ ಗೋಷ್ಠಿಯ ಅಧ್ಯಕ್ಷರಿಂದ ಮಾತು. ಸಾಹಿತ್ಯ ವಿದ್ಯಾರ್ಥಿಗಳಿಗಂತೂ ಇದು ತುಂಬಾ ಪ್ರಯೋಜನವಾಗುತ್ತಿತ್ತು.

ವಿದ್ಯಾರ್ಥಿಗಳ ಸಾಹಿತ್ಯ ರಚನೆಯನ್ನು ಪ್ರೋತ್ಸಾಹಿಸಲು ಅವಕಾಶ ಕಲ್ಪಿಸಿದರು. 'ಶರಾವತಿ' ವಾರ್ಷಿಕ ಸಂಚಿಕೆ ಪ್ರಕಟಿಸುವ ವ್ಯವಸ್ಥೆ ಮಾಡಿದರು. ಕನ್ನಡ ಮೇಜರ್ ವಿದ್ಯಾರ್ಥಿಗಳಿಂದ ಬರಹ ಬರೆಯಿಸುತ್ತಿದ್ದರು. ಹೀಗೆ ಇಂಥ ರಚನಾತ್ಮಕ ಕಾರ್ಯಗಳಿಂದ ಕನ್ನಡ ಪ್ರೀತಿಯನ್ನು ಅರಳಿಸಿದ ಕೀರ್ತಿ ಡಾ. ನಾಯಕರದ್ದು.

ಡಾ. ನಾಯಕರ ವಿದ್ಯಾರ್ಥಿಪ್ರೇಮ ಅಸದೃಶ. ತಮ್ಮ ವಿದ್ಯಾರ್ಥಿಗಳನ್ನು ಅವರು ಬೀಳ್ಕೊಡುವ ವಿಧಾನ ವಿಶಿಷ್ಟವಾದುದು. ಅಂತಿಮ ಬಿ.ಎ. ಯಲ್ಲಿರುವಾಗ ಕನ್ನಡ ಮೇಜರ್ ವಿದ್ಯಾರ್ಥಿಗಳನ್ನು ತಮ್ಮ ಮನೆಗೆ ಆಮಂತ್ರಿಸುತ್ತಿದ್ದರು. ಹೊಟ್ಟೆ ತುಂಬುವಷ್ಟು ವಿಧವಿಧ ತಿಂಡಿಗಳನ್ನು ಕೈಯಾರೆ ನೀಡುತ್ತಿದ್ದರು. ಅದೊಂದು ಅವರಿಗೆ ಪ್ರತಿವರ್ಷ

ಅಪೂರ್ವ ಕ್ಷಣ. ವರ್ಷವಿಡೀ ಪಾಠ ಕಲಿತು ದಣಿದ ತಮ್ಮ ವಿದ್ಯಾರ್ಥಿಗಳು ಒಮ್ಮೆಯಾದರೂ ತಮ್ಮ ಸಮ್ಮುಖದಲ್ಲಿ ಕಲೆತು ನಲಿಯಬೇಕು ಅದನ್ನು ಕಂಡು ತಾವು ಸಂತಸ ಪಡಬೇಕು–ಇದು ಅವರ ಹೃದಯ. ಅಲ್ಲಿ ಯಾವ ಒಣ ಮಾತು ಕತೆ ಇರುತ್ತಿರಲಿಲ್ಲ. ನಗುಮೊಗದ ಮೌನದಲ್ಲಿ ವಿದ್ಯಾರ್ಥಿಗಳ ನಡುವೆ ಕುಳಿತಿರುತ್ತಿದ್ದರು. ಆ ದೃಶ್ಯ ನೋಡುವುದೇ ಒಂದು ಚೆಂದ. ವಿದ್ಯಾರ್ಥಿಗಳಿಗೂ ಅಷ್ಟೇ ಅಪೂರ್ವ ಅನುಭವ. ಇಂಥ ಸನ್ನಿವೇಶಗಳನ್ನೆಲ್ಲ ಹಣಕೊಟ್ಟು ಪಡೆಯಲು ಸಾಧ್ಯವೆ? ಅರಿವು ಮತ್ತು ಹೃದಯವಂತಿಕೆಗಳಿಂದ ಮಾತ್ರ ಸೃಷ್ಟಿಯಾಗುವಂಥದ್ದು. ಡಾ. ನಾಯಕರು ಅಂಥವರು.

1983ರ ಹೊತ್ತಿಗೆ ಹೊನ್ನಾವರ ಕಾಲೇಜು ಒಬ್ಬ ಸಮರ್ಥ ಪ್ರಾಂಶುಪಾಲರನ್ನು ಎದುರುನೋಡುತ್ತಿತ್ತು. ಕಾಲೇಜು ಸುಧಾರಣೆಯ ಬಗ್ಗೆ ಆಡಳಿತ ಮಂಡಳಿಯಲ್ಲಿ ಚರ್ಚೆನಡೆಯುತ್ತಿತ್ತು. ಆ ಸಮಯದಲ್ಲಿ ಆಗಬೇಕಾದ ಕಾರ್ಯಗಳ ಬಗ್ಗೆ ಸೂಕ್ತ ಸಲಹೆಗಳನ್ನು ನೀಡಿದರು ಡಾ.ನಾಯಕರು. ಸಲಹೆಗಳನ್ನು ಆಡಳಿತ ಮಂಡಳಿ ಆಲಿಸಿತು. ಅಲ್ಲಿರುವ ದೂರದೃಷ್ಟಿಯನ್ನು ಗಮನಿಸಿತು. ಇವರೇ ಪ್ರಾಂಶುಪಾಲ ಹುದ್ದೆಯನ್ನು ಸ್ವೀಕರಿಸಿ ಜವಾಬ್ದಾರಿ ಹೊತ್ತರೆ ಹೇಗೆ? ಆಲೋಚಿಸಿ ನಿರ್ಧಾರಕ್ಕೆ ಬಂದಿತು. ನಾಯಕರನ್ನು ಕರೆದು ತಮ್ಮ ನಿರ್ಧಾರವನ್ನು ತಿಳಿಸಿದರು. ಡಾ. ನಾಯಕರು ಈ ಹುದ್ದೆಯ ಬಗ್ಗೆ ಯೋಚನೆ ಮಾಡಿದವರೇ ಅಲ್ಲ. ತೊಡಕುಗಳಿದ್ದರೆ ಅದನ್ನು ನಿಭಾಯಿಸುವ ವಿಶ್ವಾಸದಿಂದ ಒಪ್ಪಿದರು. ಸವಾಲಾಗಿ ಸ್ವೀಕರಿಸಿದರು. ಕಾಲೇಜನ್ನು ಉನ್ನತೀಕರಿಸಲು ತನ್ನಿಂದಾದ ದುಡಿಮೆ ಮಾಡುತ್ತೇನೆ ಎಂಬ ಆತ್ಮಸ್ಥೈರ್ಯ ಅವರಲ್ಲಿ ಹುರಿಗೊಂಡಿತು. ಅದು ನೆರವೇರಿತು ಕೂಡ.

ಅತ್ಯುತ್ತಮ ಪ್ರಾಧ್ಯಾಪಕರಾಗಿ ವರ್ಚಸ್ಸು ಪಡೆದಿದ್ದರು. ಕಾಲೇಜಿನ ಒಳಗೂ ಹೊರಗೂ ಆ ಗೌರವ ಇತ್ತು. ಸ್ವತಃ ತಮ್ಮ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಂಡ ಬೋಧಕರಾಗಿದ್ದರು ಅವರು. ಪ್ರಾಂಶುಪಾಲರಾದ

ಮೇಲೆ ಆ ಶಿಸ್ತನ್ನು ಕಾಲೇಜಿಗೂ ತಂದರು. ಶಿಸ್ತಿಲ್ಲದ ಕಾಲೇಜು ವಿದ್ಯಾರ್ಥಿಗಳ ಬದುಕನ್ನು ರೂಪಿಸುವಲ್ಲಿ ಯಶಸ್ವಿಯಾಗದು–ಎಂಬುದು ಅವರ ಖಚಿತ ನಿಲುವಾಗಿತ್ತು. ಅವರು ಮೊದಲು ಮಾಡಿದ ಸುಧಾರಣೆಯೇ ಅದು. ಅದು ದರ್ಪದಿಂದ ಸಂಭವಿಸಿದ್ದಲ್ಲ. ಕೇವಲ ಪ್ರೀತಿಯಿಂದ. ವಿದ್ಯಾರ್ಥಿಗಳಿಗೆ ಡಾ.ನಾಯಕರ ಮಮತೆ ಗೊತ್ತಿತ್ತು. ಇಬ್ಬರ ನಡುವೆ ಅಲ್ಲೊಂದು ಹೃದಯ ಸಂವಾದವಿತ್ತು. ಅವರೆಲ್ಲ ನಾಳಿನ ಸಮಾಜದ, ದೇಶದ ಭವಿಷ್ಯವನ್ನು ರೂಪಿಸುವವರು ಎಂಬ ಸಂಭ್ರಮ ಡಾ.ನಾಯಕರದ್ದು. ಅವರ ಮೇಲೆ ಅಪಾರ ವಾತ್ಸಲ್ಯ ತುಡಿಯುತ್ತಿತ್ತು. 'ಕವಚ ಕಠಿನ, ಕೋಶ ಮೃದು' ಎಂಬಂತಿದ್ದರು. ಕಣ್ಣಲ್ಲಿ ಕಣ್ಣಿಟ್ಟು ವಿದ್ಯಾರ್ಥಿಗಳನ್ನು ಗಮನಿಸುತ್ತಿದ್ದರು. ಪಾಠಾವಧಿಯಲ್ಲಿ ವಿದ್ಯಾರ್ಥಿಗಳು ತರಗತಿಯ ಒಳಗಿರಬೇಕು. ಇದು ಅವರು ತಂದ ನೀತಿ. ಆದುದರಿಂದ ಯಾರೂ ಹೊರಗೆ ಸುಳಿದಾಡುತ್ತಿರಲಿಲ್ಲ. ಪೋಕರಿತನಕ್ಕೆ ಅವಕಾಶವಿಲ್ಲ. ಅಂಥವರಿದ್ದರೆ ಅವರನ್ನು ಚೆನ್ನಾಗಿಯೇ ವಿಚಾರಿಸುತ್ತಿದ್ದರು; ತಿದ್ದುತ್ತಿದ್ದರು. ಲಂಗುಲಗಾಮು ಇಲ್ಲದ ಕೆಲವರಿಗೆ ಈ ಬಿಗಿತನ ನುಂಗಲಾರದ ತುತ್ತಾಯಿತು. ಅಂಥವರು ಮಿಸುಕಾಡಿದ್ದುಂಟು. ಅವರನ್ನು ಹದಕ್ಕೆ ತಂದರು. ವಿದ್ಯಾ ಗಾಂಭೀರ್ಯ ವಾತಾವರಣ ಕಾಲೇಜಿನೊಳಗೆ ತುಂಬಿಕೊಂಡಿತು. ಇದರಿಂದ ಏನಾಯಿತು? ಉತ್ತಮ ಕಲಿಕೆ ಸಿದ್ಧಿಸಿತು. ಒಳ್ಳೆಯ ಫಲಿತಾಂಶ ಬಂದಿತು. ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಕಾಲೇಜು ತನ್ನನ್ನು ತಾನು ಗುರುತಿಸಿಕೊಳ್ಳುವಂತಾಯಿತು.

ವಿದ್ಯಾರ್ಥಿಗಳ ಬೆಳವಣಿಗೆಗೆ ಏನು ಸೌಕರ್ಯ ಬೇಕು? ಅದರ ಪೂರೈಕೆಯ ಕಡೆಗೆ ಹೆಚ್ಚಿನ ಗಮನ ಕೊಟ್ಟರು. ಅವರಿಗೆ ಸಾಂಸ್ಕೃತಿಕ ಶಕ್ತಿ ಒದಗಿಸಲು ಆಗಾಗ ಅಂತಹ ಚಟುವಟಿಕೆಗಳನ್ನು ಸಂಘಟಿಸುತ್ತಿದ್ದರು. ಸಂಪನ್ಮೂಲ ವ್ಯಕ್ತಿಗಳನ್ನು ಕರೆಯಿಸುತ್ತಿದ್ದರು. ವಿದ್ಯಾರ್ಥಿಗಳು ಸಾಮಾಜಿಕವಾಗಿ ರೂಪುಗೊಳ್ಳಬೇಕು. ಸ್ವತಃ ಕೃಷಿ ಕುಟುಂಬದಿಂದ ಬಂದ

ನಾಯಕರಿಗೆ ದುಡಿಮೆಯ ಅನುಭವವಿತ್ತು. ಮಹತ್ವ ಗೊತ್ತಿತ್ತು. ವಿದ್ಯಾರ್ಥಿಗಳು ದುಡಿಮೆಯನ್ನು ಪ್ರೀತಿಸಬೇಕು. ಅದಕ್ಕಾಗಿ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಅವರನ್ನು ತೊಡಗಿಸಲು ಪ್ರೋತ್ಸಾಹಿಸುತ್ತಿದ್ದರು. ಕಾಲೇಜಿಗೆ ಸುಸಜ್ಜಿತ ಕಟ್ಟಡ ಒದಗಿಸುವಲ್ಲಿ ನಾಯಕರ ಪರಿಶ್ರಮ ವಿಶೇಷವಾದುದು. ಆಡಳಿತ ಮಂಡಳಿಗೆ ತಾವೇನು ಸಲಹೆ ಇತ್ತಿದ್ದರೊ ಅವುಗಳಿಗೆ ಜೀವ ಭರಿಸಿದರು ಅವರು. ಕಾಲೇಜಿನ ಅವರ ಪ್ರಾಂಶುಪಾಲ ಕಾಲಾವಧಿ ಅದರ ಇತಿಹಾಸದ ಪುಟಗಳಲ್ಲಿ ಶಾಶ್ವತವಾಗಿ ಉಳಿಯುವಂಥದ್ದು. 1993, ಜೂನ್ 30 ರಂದು ನಿವೃತ್ತರಾಗಿ ಹೊರಬರುವಾಗ ಕಾಲೇಜು ತುಂಬು ಯೌವನದಿಂದ ಕಂಗೊಳಿಸುತ್ತಿತ್ತು. ಡಾ.ನಾಯಕರ ಆಡಳಿತಾವಧಿಯಲ್ಲೇ ಕಾಲೇಜು ತನ್ನ ಬೆಳ್ಳಿಹಬ್ಬವನ್ನು ಆಚರಿಸಿಕೊಂಡುದು ಇನ್ನೊಂದು ವಿಶೇಷ.

ಹೊನ್ನಾವರದ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು ಕನ್ನಡಕ್ಕೆ ಹೆಸರಾದುದು ಡಾ.ನಾಯಕರಿಂದ ! ಗರಿಷ್ಠ ಮಟ್ಟದಲ್ಲಿ ಕನ್ನಡ ಮೇಜರ್ ವಿದ್ಯಾರ್ಥಿಗಳು ಇಲ್ಲಿದ್ದರು. ಅವರಲ್ಲಿ ಹೆಚ್ಚಿನವರಲ್ಲಿ ಕನ್ನಡ ಅಧ್ಯಾಪಕರಾಗಿ ನಾಡಿನೆಲ್ಲೆಡೆ ಹೈಸ್ಕೂಲು, ಕಾಲೇಜುಗಳಲ್ಲಿ ದುಡಿಯುತ್ತಿದ್ದಾರೆ. ಇದೂ ಕೂಡ ಡಾ.ನಾಯಕರ ವರ್ಚಸ್ಸೆಂದರೆ ತಪ್ಪಲ್ಲ. ಅಷ್ಟೇ ಅಲ್ಲ ಅದು ಅವರಿತ್ತ ಕನ್ನಡದ ದೀಕ್ಷೆಯೂ ಹೌದು.

ಜನಪದ ಸಾಹಿತ್ಯ : ಪ್ರೇರಣೆ

ಡಾ. ನಾಯಕರು ತಮ್ಮ ಜಿಲ್ಲೆಯ ಜನಪದ ಸಾಹಿತ್ಯದ ವಾರಸುದಾರರೇ ನಿಜ. ಅವರು ಹುಟ್ಟಿ ಬೆಳೆದದ್ದೆ ಜನಪದ ಕುಟುಂಬದಲ್ಲಿ. ತಂದೆ ರಾಮ ನಾಯಕರು. ಮಾತಿಗೊಂದು ಗಾದೆ ಕಟ್ಟುವವರು. ಹಾಗೆಂದೇ ಜನ ಅವರಿಗೆ 'ಗಾದೆ ರಾಮಣ್ಣ' ಎಂಬ ಬಿರುದು ಕೊಟ್ಟಿದ್ದರು. ದೇವಮ್ಮ ನಾಯಕರಿಗೆ ಗೊತ್ತಿಲ್ಲದ ಹಾಡೆ ಇರಲಿಲ್ಲ. ಹಬ್ಬ-ಹರಿದಿನ, ಕಾರ್ಯ-ಕಟ್ಲೆ, ಮದುವೆ-ಶೋಭನ-ಅಕ್ಕಪಕ್ಕದಲ್ಲಿ ಎಲ್ಲೇ ನಡೆಯಲಿ ಅಲ್ಲೆಲ್ಲ ಇವರಿಗೆ

ಆಮಂತ್ರಣವೆ. ಇವರ ಹಾಡಿನ ದನಿ ಕೇಳದವರೇ ಇಲ್ಲ. ಬಾಲ್ಯದಲ್ಲಿ ತಾಯಿಯ ಹಾಡಿನ ಸೊಬಗನ್ನು ಆಲಿಸುತ್ತ ಹಾಡಿನ ಮಡಿಲಲ್ಲೆ ಬೆಳೆದವರು ನಾಯಕರು. ಸುಗ್ಗಿ ಕುಣಿತ, ಗುಮಟೆ ಪಾಂಗು, ಯಕ್ಷಗಾನ – ನಿತ್ಯ ಇವುಗಳ ಆಕರ್ಷಣೆ. ಈ ಕಲೆಗಳಿಂದ ಆವಾಗ ಅನುಭವಿಸಿದ ಸುಖ ಅವರ್ಣನೀಯ. ಕನ್ನಡ ಶಾಲೆಯವರೆಗೆ ಈ ಪ್ರೀತಿ ಇತ್ತು. ಪ್ರೌಢಶಾಲೆಗೆ ಬಂದ ಮೇಲೆ ಹಳ್ಳಿ ಹಾಡುಗಳ ಬಗ್ಗೆ ಅವರ ಅಭಿಪ್ರಾಯ ಬದಲಾಯಿತು. ಇವೆಲ್ಲ ಅಶಿಕ್ಷಿತರ ಹಾಡು. ವಿದ್ಯಾವಂತರೆಲ್ಲ ಇವನ್ನು ಕೇಳಬಾರದು– ಈ ರೀತಿಯ ಕೀಳರಿಮೆ ಭಾವನೆ ಉಂಟಾಯಿತು. ತಮ್ಮ ತಾಯಿ ಈ ಹಾಡುಗಳನ್ನು ಹಾಡುವುದು ತಮಗದು ಅವಮಾನ ಅಂದುಕೊಂಡರು. ಇನ್ನು ಮುಂದೆ ಈ ಹಾಡುಗಳನ್ನು ಎಲ್ಲೂ ಹಾಡಬಾರದು–ಇದು ತಾಯಿಗೆ ಮಗನ ತಾಕೀತು. ಹಾಡುವ ಬಾಯಿಗೆ ಬೀಗಹಾಕಿದರು.

ಡಾ. ನಾಯಕರ ಕಾಲೇಜು ಕಲಿಕೆಯ ದಿನವದು. 1956ನೇ ಇಸ್ವಿ ಕುಮಟಾ ತಾಲೂಕಿನ ತೊರ್ಕೆ. ಅಲ್ಲಿ ಯುವ ಮಿತ್ರರ ಸಭೆಯೊಂದು ನಡೆದಿತ್ತು. ಆ ಸಭೆಗೆ ಮುಖ್ಯ ಅತಿಥಿಯಾಗಿ ಆಮಂತ್ರಿತರಾದವರು ಮುಖ್ಯ ಧುರೀಣ ಮಾನ್ಯ ಸ.ಪ.ಗಾಂವಕಾರರು. ತಮ್ಮ ಭಾಷಣದಲ್ಲಿ ಅವರು ಹಳ್ಳಿ ಹಾಡುಗಳ ಬಗ್ಗೆ ಯುವಕರ ಗಮನ ಸೆಳೆದರು. ಕೆಲವು ಹಾಡುಗಳನ್ನು ಹೇಳಿ ಸೊಗಸಾಗಿ ವಿವರಿಸಿದರು. ಅಲ್ಲಿರುವ ಬದುಕನ್ನು ತೋರಿಸಿದರು. ಯುವಕರು ಈ ಸಾಹಿತ್ಯದ ಕಡೆಗೆ ಆಸಕ್ತರಾಗಬೇಕು ಎಂದರು. ಡಾ. ನಾಯಕರು ಆ ಸಭೆಯಲ್ಲಿದ್ದರು. ಸ.ಪ.ಗಾಂವಕಾರರ ಭಾಷಣ ಯುವ ಮನಸ್ಸನ್ನು ಎಚ್ಚರಿಸಿತು. ಹಳ್ಳಿ ಹಾಡುಗಳ ಬಗೆಗಿನ ಕೀಳರಿಮೆ ಭಾವನೆ ತೊಲಗಿತು. 'ಹಾಡಬಾರದು' ಎಂದು ತಾಯಿಗೆ ತಾಕೀತು ಮಾಡಿದ್ದಕ್ಕೆ ಪಶ್ಚಾತ್ತಾಪ ಪಟ್ಟರು. ಮತ್ತೆ ತಾಯಿಯಿಂದಲೇ ಹಾಡು ಹಾಡಿಸಿ ಆಲಿಸಿದರು. ಸಂಗ್ರಹಕ್ಕೂ ತೊಡಗಿದರು. ಆಸಕ್ತಿ ಹೆಚ್ಚ ತೊಡಗಿತು.

1965ರಲ್ಲಿ ಡಾ. ನಾಯಕರು ಮದುವೆಯಾದರು. ಬಾಳ

ಸಂಗಾತಿಯಾಗಿ ಕೈಹಿಡಿದವರು ಶಾಂತಿ ನಾಯಕರು. ಅಧ್ಯಾಪಕಿಯಾದ ಅವರಿಗೂ ಜನಪದ ಸಾಹಿತ್ಯದಲ್ಲಿ ಹೆಚ್ಚಿನ ಅಭಿರುಚಿ. ಇಬ್ಬರದ್ದೂ ಸಮಾನ ಮನಸ್ಸು, ಆಸಕ್ತಿ. ಈಗ ಡಾ.ನಾಯಕರ ಆಸಕ್ತಿಗೆ ಗರಿಗಟ್ಟಿತು. ಜನಪದ ಸಾಹಿತ್ಯಸಂಗ್ರಹ ಕಾರ್ಯಕ್ಕೆ ಇಬ್ಬರೂ ತೊಡಗಿಕೊಂಡರು. ಮುಂದಿನ ಎಲ್ಲ ಸಾಧನೆಗೂ ಡಾ.ನಾಯಕರಿಗೆ ಶಾಂತಿನಾಯಕರು ಬೆಂಬಲವಾದರು.

ಇದೇ ಸುಮಾರಿಗೆ ಡಾ.ಬಿ.ಎಸ್. ಗದ್ದಗಿ ಮಠ ಅವರು ಜನಪದ ಸಾಹಿತ್ಯದ ಮೇಲೆ ಪಿಹೆಚ್.ಡಿ. ಮಾಡಿದ್ದರು. ಆದರೆ ಉತ್ತರ ಕನ್ನಡ ಜಿಲ್ಲೆಯ ಜನಪದ ಗೀತೆಗಳನ್ನು ಅವರು ಗಮನಿಸಿರಲಿಲ್ಲ. ಡಾ.ನಾಯಕರು ಇದನ್ನು ಸೂಕ್ಷ್ಮವಾಗಿ ಅರಿತರು. ಇದೇ ವೇಳೆಗೆ ಎಸ್.ಆರ್. ಪಂಚಮುಖಿಯವರ 'ಕರ್ನಾಟಕದ ಜನಪದ ಗೀತೆಗಳು' ಪ್ರಕಟವಾಗಿತ್ತು. ಅಲ್ಲೂ ಉತ್ತರಕನ್ನಡ ಜಿಲ್ಲೆಯ ಜನಪದ ಸಾಹಿತ್ಯ ನಿರ್ಲಕ್ಷ್ಯಕ್ಕೊಳಗಾಗಿತ್ತು. ಹವ್ಯಕರ ಕೆಲವು ಹಾಡುಗಳನ್ನು ಮಾತ್ರ ಪಂಚಮುಖಿಯವರು, ಸಂಗ್ರಹಿಸಿದ್ದರು. ಅವನ್ನು ನೋಡಿ ಅವರು ಇವು ದಾಸರ ಹಾಡುಗಳನ್ನು ಹೋಲುತ್ತವೆ ಅಂದಿದ್ದರು. ಇಲ್ಲಿ ಸಾಮಾನ್ಯ ಜನವರ್ಗದವರ ಸಾಹಿತ್ಯವನ್ನು ಅವರು ಮುಟ್ಟೇ ಇರಲಿಲ್ಲ. ಡಾ.ನಾಯಕರು ಇದನ್ನು ಮನಗಂಡರು. ಇದು ಅನ್ಯಾಯ ಅಂದುಕೊಂಡರು. ಇದರ ಸತ್ಯವನ್ನು ತಾವೇ ಯಾಕೆ ಅನಾವರಣ ಮಾಡಬಾರದು ಎಂದು ಪ್ರಶ್ನಿಸಿಕೊಂಡರು. 'ಕಾರವಾರ ಜಿಲ್ಲೆಯ ಜನಪದ ಗೀತೆಗಳು' ಎಂಬ ವಿಷಯದ ಮೇಲೆ ಅಧ್ಯಯನ ಆರಂಭಿಸಿದರು. 1969ರಲ್ಲಿ ಪಿಹೆಚ್.ಡಿ.ಗಾಗಿ ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಹೆಸರು ನೊಂದಾಯಿಸಿದರು. ಜನಪದ ಸಾಹಿತ್ಯ ಸಾಧನೆಗೆ ಇದು ಪ್ರೇರಣೆಯಾಯಿತು.

ತಮ್ಮ ಪತ್ನಿಯೊಡಗೂಡಿ ಕ್ಷೇತ್ರಕಾರ್ಯಕ್ಕೆ ತೊಡಗಿದರು. ಉತ್ತರ ಕನ್ನಡವು ಬುಡಕಟ್ಟು ಜನವರ್ಗ, ಹಿಂದುಳಿದ ವರ್ಗ, ಹರಿಜನ–ಗಿರಿಜನ ವರ್ಗಗಳ ನೆಲೆವೀಡು. ಹಾಲಕ್ಕಿ, ಸಿದ್ಧಿ, ನಾಡವ, ನಾಮಧಾರಿ, ಹವ್ಯಕ, ಆಗೇರ,

ಗಾಮೊಕ್ಕಲು, ಕರಿಯೊಕ್ಕಲು, ಕೋಮಾರ ಪಂಥ, (ಹರಿಕಾಂತ, ಅಂಬಿಗ, ಹಳ್ಳೀರ, ಮುಕರಿ–ಇವರೆಲ್ಲ ಕನ್ನಡ ಆಡುನುಡಿಯ ಜನಪದರು.) ಸಾಹಿತ್ಯದ ಕಣಜವೇ ಆದವರು. ಡಾ.ನಾಯಕರು ಹಳ್ಳಿ ಹಳ್ಳಿಗೆ ತೆರಳಿದರು. ಅಲ್ಲಿರುವ ಹಾಡುಗಾರರನ್ನು ಕಂಡರು; ಮಾತಾಡಿಸಿದರು; ಅವರ ಯೋಗಕ್ಷೇಮ ವಿಚಾರಿಸಿದರು; ಕೂರಿಸಿಕೊಂಡು ವಿಶ್ವಾಸ ಮೂಡಿಸಿದರು. ಹಾಡಿಸಿದರು. ಹಾಡಿದಂತೆ ಬರೆದುಕೊಂಡರು. ಬರೆದು ಬರೆದು ಸಂಗ್ರಹಿಸಿದರು. ಸಾವಿರಾರು ಪುಟಗಳ ಹಾಡುಗಳನ್ನು ಇತ್ತರು. ಅವನ್ನು ಅಧ್ಯಯನಕ್ಕೆ ಒಳಪಡಿಸಿದರು. ಅಲ್ಲಿರುವ ಬದುಕನ್ನು ತೋರಿಸಿದರು. ಅವರ ಸಂಸ್ಕೃತಿಯನ್ನು ಶೋಧಿಸಿದರು. ಮೌಲ್ಯಗಳನ್ನು ಅಳೆದರು. ಹಾಡುಗಳು ಮಾತ್ರವಲ್ಲ; ಅವರ ಕಲೆ, ಕುಣಿತ, ಆಟ, ಆಚರಣೆ–ಒಟ್ಟೂ ಬದುಕಿನ ವಿರಾಡ್ರೂಪವನ್ನೇ ದರ್ಶಿಸಿದರು. ಅವುಗಳಿಗೆ ಅಕ್ಷರರೂಪವನ್ನು ಕೊಟ್ಟರು. ಮುದ್ರಣದ ಒಪ್ಪಹಾಕಿದರು. ಮುಂದಿನ ತಲೆಮಾರಿಗೆ ಸಂಪತ್ತಾಗಿಸಿದರು. ಇತಿಹಾಸ ಕೊಟ್ಟರು.

ಕೃತಿಗಳ ಪರಿಚಯ :

ಈಗ ಪ್ರಕಟವಾದ ಡಾ.ನಾಯಕರ ಕೃತಿಗಳ ಸಂಖ್ಯೆ ಐವತ್ತೆಂಟು. ಅವನ್ನು 1)ಜಾನಪದ ಕೃತಿಗಳು 2)ಜಾನಪದೇತರ ಕೃತಿಗಳು ಎಂದು ವಿಂಗಡಿಸಬಹುದು. ಜಾನಪದ ಕೃತಿಗಳನ್ನು ಪದ್ಯ ಕೃತಿಗಳು ಅಥವಾ ಸಂಪಾದನಾ ಕೃತಿಗಳು ಮತ್ತು ಗದ್ಯ ಕೃತಿಗಳು ಎಂದು ವಿಭಾಗಿಸಿಕೊಳ್ಳಬಹುದು. ಪದ್ಯಕೃತಿಗಳೆಂದರೆ ಜನಪದ ಹಾಡುಗಳು, ಪದಗಳು. ಡಾ.ನಾಯಕರು ಇವನ್ನು ದೊಡ್ಡ ಮೊತ್ತದಲ್ಲಿ ಸಂಪಾದಿಸಿದ್ದಾರೆ. ಇವುಗಳ ಸ್ವರೂಪವನ್ನು ಲಕ್ಷಿಸಿ ಇವನ್ನು ಐದು ವಿಧವಾಗಿ ವರ್ಗೀಕರಿಸುವುದು ಸೂಕ್ತವೆನಿಸುತ್ತದೆ.

ಅ. **ಜನಾಂಗಿಕ ಹಾಡುಗಳ ಸಂಗ್ರಹಗಳು**; ಜೇಂಗೊಡ (1971). ಪಡುಕೋಗಿಲೆ (1973), ಹಳ್ಳೇರ ಜನಪದ ಸಾಹಿತ್ಯ (2000), ಮುಕ್ರಿಗಳ

ಜನಪದ ಗೀತ ಮತ್ತು ಕಥೆಗಳು (2000), ಗಾಮೊಕ್ಕಲ ಹಾಡುಗಳು (2004)–ಇವು ಐದು ಈ ಮಾಲಿಕೆಯ ಕೃತಿಗಳು.

'ಜೇಂಗೊಡ' ನಾಮಧಾರಿಗಳ ಹಾಡುಗಳನ್ನು ಒಳಗೊಂಡಿದೆ. ಇದರಲ್ಲಿ ಒಟ್ಟೂ 676 ತ್ರಿಪದಿಗಳಿವೆ. ಹಾಡು, ಕೌಟುಂಬಿಕ ಚಿತ್ರಗಳು, ಶೃಂಗಾರ ಸನ್ನಿವೇಶಗಳು, ಹಾಸ್ಯ, ಬಯ್ಗುಳ, ಶಕುನ, ಹಿತವಚನ, ಬತ್ತ ಕುಟ್ಟುವ ಹಾಡು, ದೇವರು, ಭಕ್ತಿ, ಬಿಡಿಮುತ್ತುಗಳು – ಹೀಗೆ ಹತ್ತು ಭಾಗಗಳಲ್ಲಿ ವಿಂಗಡಿಸಲಾಗಿದೆ. 'ಪಡುಕೋಗಿಲೆ' ಉತ್ತರಕನ್ನಡ ಜಿಲ್ಲೆಯ ನಾಡವರ ಹಾಡುಗಳ ಸಂಗ್ರಹ. 767 ತ್ರಿಪದಿಗಳು ಇಲ್ಲಿವೆ. ಆರು ಚಿಗುರುಗಳಲ್ಲಿ ವಿಭಾಗಿಸಿಕೊಳ್ಳಲಾಗಿದೆ. ಪ್ರತಿ ಚಿಗುರಿನಲ್ಲಿ ಉಪಶೀರ್ಷಿಕೆಯ ಹಾಡುಗಳು ಬಂದಿವೆ. ಹಳ್ಳೇರ ಜನವರ್ಗದ ಹಾಡು, ಪದ, ಕತೆಗಳ ಸಂಗ್ರಹ, 'ಹಳ್ಳೇರ ಜನಪದ ಸಾಹಿತ್ಯ.' ಹಾಡುಗಳು, ಪದಗಳು, ಕಥನ ಗೀತಗಳು, ಗದ್ಯ ಕತೆಗಳು, ಒಗಟುಗಳು–ಹೀಗೆ ಐದು ವಿಭಾಗಗಳಿವೆ. ಪದದಲ್ಲಿ ಕಾಡಿಯಾಪದ, ಗಮಟೆಯ ಪದ, ಕೋಲು ಪದ ಎಂಬ ಮೂರು ಉಪವಿಭಾಗಗಳಿವೆ. ಅವರ ಆಡುನುಡಿಗಳಲ್ಲೇ ಹತ್ತು ಕತೆಗಳನ್ನು ನಿರೂಪಿಸಲಾಗಿದೆ. ಮುಕ್ರಿ ಉತ್ತರಕನ್ನಡ ಜಿಲ್ಲೆಯ ಇನ್ನೊಂದು ದಲಿತಜನವರ್ಗ. ಇವರ ಸಾಹಿತ್ಯವನ್ನು 'ಮುಕ್ರಿಗಳ ಗೀತಗಳು ಮತ್ತು ಕಥೆಗಳು' ಕೃತಿಯಲ್ಲಿ ಸಂಗ್ರಹಿಸಿದ್ದಾರೆ. ಇಲ್ಲೂ ಗೀತಗಳು, ಪದಗಳು ಮತ್ತು ಕಥೆಗಳು ಎಂಬುದಾಗಿ ವರ್ಗೀಕರಿಸಿಕೊಳ್ಳಲಾಗಿದೆ. ಬೇರೆ ಬೇರೆ ಉಪವಿಭಾಗಗಳಲ್ಲಿ ಇವರ ಸಾಹಿತ್ಯವನ್ನು ನಿರೂಪಿಸಿದ್ದಾರೆ.

ಆ. ಧಾರ್ಮಿಕ ನಂಬಿಕೆ–ಆಚರಣೆ ಕುರಿತ ಹಾಡುಗಳ ಸಂಗ್ರಹಗಳು; ತುಳಸಿ ತಿಮ್ಮಪ್ಪರಾಯ ಹಾಡುಗಳು (2002), ಬಾ ಗಣಪ ನಮ್ಮ ಮನೆಗೆ (2005), ನಾರಾಯಣ ದೇವ (2005)–ಇವು ಈ ವರ್ಗಕ್ಕೆ ಸೇರುವ ಕೃತಿಗಳು.

'ತುಳಸಿ ತಿಮ್ಮಪ್ಪರಾಯ'ದಲ್ಲಿ ತಿರುಪತಿ ತಿಮ್ಮಪ್ಪನ ಆರಾಧನೆಯ ಕುರಿತ ಹಾಡುಗಳಿವೆ. ತಿರುಪತಿ ಯಾತ್ರೆ, ದೇವರ ಕಾರ್ಯ, ತುಳಸಿ ಪೂಜೆ–ಇತ್ಯಾದಿಗಳ ಬಗ್ಗೆ ಜನಪದರ ನಂಬಿಕೆ ಇಲ್ಲಿ ವ್ಯಕ್ತವಾಗಿದೆ. ಹಾಲಕ್ಕಿ ಒಕ್ಕಲಿಗರು, ನಾಮಧಾರಿಗಳು, ಹರಿಕಾಂತರು, ಹವ್ಯಕರು, ನಾಡವರು, ಗೊಂಡರು, ಗಾಮೊಕ್ಕಲು–ಈ ಜನವರ್ಗಗಳಿಂದ ಸಂಗ್ರಹಿಸಿದ ಹದಿನಾಲ್ಕು ಹಾಡುಗಳು ಇಲ್ಲಿವೆ. 'ಬಂದಾನೆ ಬಲಿಯಂದ್ರ ರಾಯ' ದಲ್ಲಿ ಜನಪದರ ದೀಪಾವಳಿ ಎರಕಗೊಂಡಿದೆ. ಕೃಷಿಕರ ಸಂಭ್ರಮದ ಆರಾಧನೆ ತುಂಬಿಕೊಂಡ ಹಾಡುಗಳಿವು. ಕೃಷಿಯೆ ಬದುಕಾಗುಳ್ಳ ವಿವಿಧ ಜನವರ್ಗಗಳ 36 ಹಾಡುಗಳು ಇಲ್ಲಿ ಸಂಗ್ರಹಗೊಂಡಿವೆ. ಕೃಷಿಕರ ದೇವರಾದ ಬಲೀಂದ್ರ ಪೂಜೆಯ ಸೊಬಗನ್ನ, ದನಕರುಗಳ ಪ್ರೀತಿಯನ್ನು, ಒಟ್ಟೂ ಭಕ್ತಿ–ನಂಬಿಕೆಗಳು ಈ ಹಾಡುಗಳಲ್ಲಿ ಮೈವೆತ್ತಿವೆ. 'ಗ್ರಾಮದೇವತೆಗಳ ಹಾಡುಗಳ'ಲ್ಲಿ ಭೂಮಿ, ತಾಯಿ ಸಣ್ಣಮ್ಮ, ಸಿರಸಿಯಮ್ಮ, ತೊಳಚಮ್ಮ, ಕಾನಬೀರ, ಜೈನಬೀರ, ದಂಡಿನ ಹನುಮ–ಹೀಗೆ ವಿವಿಧ ಗ್ರಾಮಗಳಲ್ಲಿ ಆರಾಧಿಸುವ ವಿವಿಧ ದೈವಗಳಿಗೆ ಸಂಬಂಧಿಸಿದ 26 ಹಾಡುಗಳು ಇವೆ. ಗಣಪತಿ ಆರಾಧನೆಯ 28 ಹಾಡುಗಳು 'ಗಣಪ ಬಾ ನಮ್ಮ ಮನೆಗೆ' ಸಂಗ್ರಹದಲ್ಲಿ ಇವೆ.

ಇ. ಕಲೆ–ಕುಣಿತಗಳ ಪದಗಳ ಸಂಗ್ರಹಳು : ಹೇಳುತೇವೊ ಗುಮಟೆ ಪದ ನಾವಾ (1983), ಸುಗ್ಗಿಯ ಪದಗಳು (1987), ಸುಗ್ಗಿಹಬ್ಬ (1999)–ಈ ಮೂರು ಸಂಗ್ರಹ ಇಲ್ಲಿವೆ.

'ಹೇಳುತೇವೋ ಗುಮ್ಟೆ ಪದನಾವಾ' ದಲ್ಲಿ ಒಟ್ಟಿಗೆ 95 ಪದಗಳಿವೆ. ಇವನ್ನು ನಿವೇದನೆ, ದೇವತಾಸ್ತುತಿ ಪ್ರಸಂಗ, ಪೌರಾಣಿಕ ಪ್ರಸಂಗ, ಐತಿಹ್ಯ ಪ್ರಸಂಗ, ಸಾಮಾಜಿಕ ಪ್ರಸಂಗ, ಸಂಕೀರ್ಣ ಪ್ರಸಂಗ ಎಂದು ವಿಭಜಿಸಿಕೊಳ್ಳಲಾಗಿದೆ. ಪ್ರತಿಯೊಂದು ವಿಭಾಗದಲ್ಲೂ ಉಪಶೀರ್ಷಿಕೆಯ ಹಲವಾರು ಪದಗಳಿವೆ. ಇವು ಹಾಲಕ್ಕಿಗಳ ಗುಮ್ಟೆ ಕುಣಿತದ ಪದಗಳು.

ಉತ್ತರ ಕನ್ನಡ ಜಿಲ್ಲೆಯ ಜನಪ್ರಿಯ ಕಲೆ ಸುಗ್ಗಿಯಾಟ. ಹಾಲಕ್ಕಿ ಒಕ್ಕಲಿಗರು–ಈ ಕಲೆಯಲ್ಲಿ ನಿಪುಣರು. 'ಸುಗ್ಗಿ ಪದಗಳು' ಸಂಗ್ರಹದಲ್ಲಿ ಪದಗಳನ್ನು ಸಂಗ್ರಹಿಸಲಾಗಿದೆ. 56 ಪದಗಳು ಇಲ್ಲಿವೆ. ಸುಗ್ಗಿ ಪೀಠಿಕೆ, ದೇವತಾಸ್ತುತಿ, ಪ್ರೀತಿಹಾಸ, ಒಗಟು, ಏಕಾವಳಿ, ಬಿಡಿ ಪದಗಳು, ಬಿಡಿದ್ವಿಪದಿಗಳು, ಅಲಾವಿ ಪದ, ಮುಕ್ತಾಯ, ಕಾಮದಹನ – ಹೀಗೆ ಹತ್ತು ವಿಂಗಡನೆ ಇದೆ. ಹಾಲಕ್ಕಿಗಳ ಜೀವನೋತ್ಸಾಹ ಈ ಪದಗಳಲ್ಲಿ ಮಟಿದಿವೆ. ಅವರ ನಂಬಿಕೆ, ಮನೋಭಾವಗಳೆಲ್ಲ ಇಲ್ಲಿ ರೂಪಧರಿಸಿವೆ. 'ಸುಗ್ಗಿ ಹಬ್ಬ' ಇದರದ್ದೆ ವಿಸ್ತೃತ ರೂಪ. ಇಲ್ಲಿ ವಿವಿಧ ವರ್ಗದವರ ಸುಗ್ಗಿಯಾಟವನ್ನು ಗಮನಿಸಲಾಗಿದೆ. ವಿಸ್ತಾರವಾದ ಪ್ರಸ್ತಾವನೆಯು ಸುಗ್ಗಿ ಹಬ್ಬದ ಬಗ್ಗೆ ಹೊಸ ಹೊಸ ವಿಚಾರವನ್ನು ನೀಡುತ್ತದೆ.

ಈ. ಮದುವೆ ಆಚರಣೆ ಹಾಡುಗಳ ಸಂಗ್ರಹ; 'ಕೂಸಾಯ್ತು ನಮ್ಮ ಕೊಮಾರಾಗೆ(1983) ಇದು ಮದುವೆ ಹಾಡುಗಳ ಬೃಹತ್ ಸಂಗ್ರಹ. ಕನ್ನಡ ಜನಪದ ಕಾವ್ಯಗಳಲ್ಲಿ ಇದು ವಿಶಿಷ್ಟವಾದ ಸಂಪಾದನಾ ಕೃತಿ. ಪೀಠಿಕೆ ಸಹಿತ 450 ಪುಟಗಳಷ್ಟು ವಿಸ್ತಾರವಾಗಿದೆ. ಎರಡು ಸಾವಿರದ ಮುನ್ನೂರು ತ್ರಿಪದಿಗಳಿವೆ. ನಾಡವರು, ಹವ್ಯಕರು, ಹಾಲಕ್ಕಿ ಒಕ್ಕಲಿಗರು, ನಾಮಧಾರಿ ಮುಂತಾದ ಎಂಟು ಜನವರ್ಗಗಳ ಮದುವೆ ಹಾಡುಗಳನ್ನು ಸಂಗ್ರಹಿಸಲಾಗಿದೆ. ಅವನ್ನು ಪ್ರತ್ಯೇಕ ಪ್ರತ್ಯೇಕವಾಗಿಕೊಡಲಾಗಿದೆ. ಜನಪದರ ಮದುವೆ ಮಹತ್ತ್ವವನ್ನು ಈ ಹಾಡುಗಳು ನುಡಿಯುತ್ತವೆ. ಜೀವನದ ಮಧುರ ಕ್ಷಣಗಳನ್ನು ಅವು ಹಿಡಿದಿಟ್ಟಿವೆ. ಮದುವೆ ಸಂಪ್ರದಾಯ ಚಡಂಗಗಳಿಗನುಗುಣವಾಗಿ ಈ ಹಾಡುಗಳನ್ನು ವರ್ಗೀಕರಿಸಲಾಗಿದೆ. ವಿವಿಧ ಜನವರ್ಗಗಳ ಮದುವೆ ಸಂಪ್ರದಾಯಗಳ ತೌಲನಿಕ ಅಧ್ಯಯನಕ್ಕೆ ಈ ಕೃತಿ ತುಂಬಾ ಉಪಯುಕ್ತ.

ಉ. ಪುರಾಣ–ಕಾವ್ಯ–ಕತೆಗಳ ಹಾಡುಗಳ ಸಂಗ್ರಹಗಳು: ಗಾಮೊಕ್ಕಲ ಮಹಾಭಾರತ (1992). ಪಾಠಾಂತರ ಕಥನ ಕವನಗಳು (1997),

ಕಪಟಿಗಳ ಕತೆ (1999), ಅಭಿಮನ್ಯು(2003) ಕೋಮಾರ ಪಂತರ ಕಥನ ಕವನಗಳು (2004), ಸಾವಿತ್ರಿ (2007). 'ಗಾಮೊಕ್ಕಲ ಮಹಾಭಾರತ' ಗಾಮೊಕ್ಕಲಿಗರ ಹಾಡುಗಳಲ್ಲಿ ಮೂಡಿಬಂದಿದೆ. ಅವರ ಬದುಕಿಗೆ ಹತ್ತಿರವಾಗಿದೆ. ಧರ್ಮರು, ಗೀಜಗ, ಸುಭದ್ರೆ, ಲಕ್ಷ್ಮಣ, ಅರ್ಜುನ, ಕುಸುಮಾಲಿ, ನಾಲ್ವರು ಹೆಂಡಿರು, ಕನಕಾಂಗಿ ಕಲ್ಯಾಣ, ಅಭಿಮನ್ಯು, ಸಾವಿತ್ರಿ–ಈ ಹತ್ತು ಶೀರ್ಷಿಕೆಗಳಲ್ಲಿ ಕಥನಗೊಂಡಿದೆ. 'ಅಭಿಮನ್ಯು' ಪ್ರತ್ಯೇಕ ಖಂಡಕಾವ್ಯ. ಅಭಿಮನ್ಯು ಜನಪದ ಖಂಡಕಾವ್ಯವೂ ಆಂಶಿಕವಾಗಿ ಶಿಷ್ಟ ಮಹಾಭಾರತ ಐತಿಹ್ಯ ಪ್ರಸಂಗವುಳ್ಳದ್ದಾದರೂ ಅಭಿಮನ್ಯುವಿನ ಹುಟ್ಟು, ಮದುವೆ ಹಾಗೂ ಸಾವಿನ ಕಥಾವಸ್ತು ಭಿನ್ನ ಸ್ವರೂಪ ಹೊಂದಿದೆ, ಎನ್ನುತ್ತಾರೆ ಡಾ.ನಾಯಕರು. ಈ ಕತೆಯಲ್ಲಿ ಉತ್ತರಕನ್ನಡತನವಿದೆ ಎಂದು ಹೇಳುತ್ತಾರೆ. ಹಾಡುಗಳು ಆದನ್ನು ನಿದರ್ಶಿಸುತ್ತವೆ. 'ಕಪಟಿಗಳ ಕಥೆ' ಯಲ್ಲಿ ಚಿನ್ನಕೋಡ್ನ ಚಿನ್ನ ಬಸ್ವ ಬಿಳ್ಳಿ ಕೋಡ್ನ ಬಿಳ್ಳಿ ಬಸ್ವ, ದಾಳಿಂಬ ಮೊಕದವ, ಅತ್ತೆ, ಅಣ್ಣ–ತಮ್ಮ, ಅಣ್ಣ–ತಂಗಿ, ಈ ಐದು ಕಥನ ಗೀತಗಳು ಇಲ್ಲಿವೆ. ಜೊತೆಜೊತೆಗೆ ಪ್ರತಿಯೊಂದರ ಭಿನ್ನ ಪಾಠವನ್ನು ಕೊಡಲಾಗಿದೆ. 'ಪಾಠಾಂತರ ಕಥನಕವನಗಳು' ವಿಶಿಷ್ಟವಾದ ಸಂಪಾದನಕೃತಿ. ಒಂದೇ ಕಥಾವಸ್ತುವಿನ ವಿಭಿನ್ನ ಪಾಠಾಂತರಗಳನ್ನು ಇಲ್ಲಿ ಕೊಡಲಾಗಿದೆ. ಡಾ.ನಾಯಕರ ಸಂಶೋಧನಾ ಮನಸ್ಸನ್ನು ಇಲ್ಲಿ ಕಾಣಬಹುದಾಗಿದೆ.

ಸಂಪಾದನಾ ಕೃತಿಗಳಲ್ಲಿ ಕಂಡುಬರುವ ವೈಶಿಷ್ಟ್ಯ :

ಕ್ಷೇತ್ರ ಕಾರ್ಯಗಳ ಬಹುಶ್ರಮ ಇಲ್ಲಿ ಕಂಡುಬರುತ್ತದೆ. ಹಾಡು ಅಥವಾ ಪದಗಳ ಸಂಗ್ರಹದ ಜೊತೆಗೆ ಆ ವಿಷಯ ಅಥವಾ ಆ ಜನಾಂಗಗಳ ಮೂಲ, ಸಂಪ್ರದಾಯ, ನಂಬಿಕೆ, ಜೀವನಪದ್ಧತಿ, ಆಚರಣೆ, ಕಲೆ ಇತ್ಯಾದಿಗಳ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ಪಡೆದುಕೊಳ್ಳುತ್ತಾರೆ. ಸಂದರ್ಭಾನುಸಾರ ಅವನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ. ಅವರ ಜೀವನ ಸತ್ಯ ಮತ್ತು ಮೌಲ್ಯಗಳ ಮೇಲೆ ಬೆಳಕುಚೆಲ್ಲುತ್ತಾರೆ.

ಪ್ರತಿಯೊಂದು ಸಂಗ್ರಹ ಕೃತಿಗೂ ಪ್ರಸ್ತಾವನೆ ನೀಡಿದ್ದಾರೆ. ಆ ಪ್ರಸ್ತಾವನೆ ವಿಸ್ತಾರವಾಗಿದೆ. ಅಧ್ಯಯನದಿಂದ ಕೂಡಿದೆ. ತಾವು ಸಂಗ್ರಹಿಸಿದ ಮಾಹಿತಿಗಳನ್ನು ಅಲ್ಲಿ ಮುಂದಿಡುತ್ತಾರೆ. ಹಾಡುಗಳ ಆಧಾರವನ್ನು ಇಟ್ಟುಕೊಳ್ಳುತ್ತಾರೆ. ನೇರ ಚರ್ಚೆಗೆ ತೊಡಗುತ್ತಾರೆ. ಒಳನೋಟ ಬೀರುತ್ತಾರೆ. ಸಾಂಸ್ಕೃತಿಕ, ಸಾಮಾಜಿಕ ಮಹತ್ತ್ವವುಳ್ಳ ವಿಶ್ಲೇಷಣೆ ನೀಡುತ್ತಾರೆ. ಆಯಾವ ಸಂಗ್ರಹದಲ್ಲಿ ಸಂಗ್ರಹಗೊಂಡ ಸಾಹಿತ್ಯದ ಸಮೀಕ್ಷೆಯನ್ನೂ ನಡೆಸುತ್ತಾರೆ. ಭಾಷೆ–ಧ್ವನಿಗಳ ಜನಪದೀಯ ವೈವಿಧ್ಯವನ್ನು, ವೈಶಿಷ್ಟ್ಯವನ್ನು ಗುರುತಿಸುತ್ತಾರೆ.

ಡಾ. ನಾಯಕರು ಹೆಂಗಸರ ಗೀತಗಳನ್ನು 'ಹಾಡು'ಎಂದೂ ಗಂಡಸರ ಗೀತೆಗಳನ್ನು 'ಪದ' ಎಂದೂ ಹೆಸರಿಸಿದ್ದಾರೆ. ಇದು ಸರಿಯಾದ ಗುರುತಿಸುವಿಕೆಯೇ ಆಗಿದೆ. ಜಾನಪದ ವಿಜ್ಞಾನದ ಆಂತರಿಕ ಶಿಸ್ತಿಗೆ ಒಳಪಡಿಸಿ ಹಾಡು, ಪದಗಳನ್ನು ವಿಭಜಿಸುತ್ತಾರೆ. ಪ್ರತಿಯೊಂದು ಹಾಡು, ಪದಕ್ಕೂ ಉಪಶೀರ್ಷಿಕೆ ಕೊಡುತ್ತಾರೆ. ಆ ಉಪಶೀರ್ಷಿಕೆ ಹಾಡು ಅಥವಾ ಪದದೊಳಗಿನ ಸೊಲ್ಲೇ ಆಗಿರುತ್ತದೆ. ಈ ಆಯ್ಕೆಯಲ್ಲೂ ಅವರು ಕಲಾತ್ಮಕತೆಯನ್ನು ತೋರುತ್ತಾರೆ.

ಡಾ. ನಾಯಕರು ಪದ್ಯಗಳನ್ನು ಸಂಗ್ರಹಿಸುವಾಗ ಜನಪದ ಒಕ್ಕಣೆಗಳನ್ನು ಒಂದಿಷ್ಟೂ ವ್ಯತ್ಯಾಸ ಮಾಡುವುದಿಲ್ಲ. ಅಸಲಿ ಪಾಠಗಳನ್ನೇ ನೀಡುತ್ತಾರೆ. ಅವರ ಧ್ವನಿಯ ವ್ಯವಸ್ಥೆ, ಭಾಷಾ ಸ್ವರೂಪಕ್ಕೆ ವಿಶೇಷಗಮನ ಕೊಡುತ್ತಾರೆ. ಆಯಾವ ಜನವರ್ಗದ ಬಳಕೆಯ ನುಡಿಗಳಿಗೆ ಅಡಿ ಟಿಪ್ಪಣಿಯಲ್ಲಿ ಅಥವಾ ಕೊನೆಯಲ್ಲಿ ಗ್ರಾಂಥಿಕ ಅರ್ಥ ಕೊಡುತ್ತಾರೆ. ಪ್ರಾದೇಶಿಕ ಭಾಷಾ ವೈಶಿಷ್ಟ್ಯವನ್ನು ದಾಖಲಿಸುತ್ತಾರೆ.

ಜನಪದ ಹಾಡುಗಾರ್ತಿಯರಿಗೆ ಪದಗಾರರಿಗೆ ಕೊಡುವ ಗೌರವ ದೊಡ್ಡದು. ಡಾ.ನಾಯಕರು ಆ ನಿರೂಪಕರ ಹೆಸರು, ಊರು, ವಯಸ್ಸು– ಇವನ್ನು ತಪ್ಪದೆ ದಾಖಲಿಸುತ್ತಾರೆ. ಅದರಿಂದ ಸಾಹಿತ್ಯ ಪಡೆದ ಡಾ.ನಾಯಕರು ಎಲ್ಲೂ ತಾವು ಅವರಿಗಿಂತ ದೊಡ್ಡವರು ಎಂದು

ಭಾವಿಸುವುದಿಲ್ಲ. ಬಾಯಿಂದ ಬಾಯಿಗೆ, ಕಿವಿಯಿಂದ ಕಿವಿಗೆ ಈ ಸಂಪತ್ತನ್ನು ಕಾಪಾಡಿಕೊಂಡು ಬಂದ ಈ ಜನರ ಮೇಲೆ ಅವರಿಗೆ ಅಪಾರ ಪ್ರೀತಿ, ಗೌರವ, ಈ ಎಲೆಯ ಮರೆಯ ಪ್ರತಿಭೆಗಳನ್ನು ಬೆಳಕಿಗೆ ತಂದ ಸಂತಸ ಮಾತ್ರ ಅವರಿಗೆ. ತಮ್ಮ ಈ ಸಾಧನೆಗೆಲ್ಲ ಅವರೇ ಮೂಲ ಶಕ್ತಿ ಅನ್ನುತ್ತಾರೆ. ಆಧುನಿಕ ಜಗತ್ತಿಗೆ ಜನಪದ ಸಂಸ್ಕೃತಿಯ ಮೌಲ್ಯಗಳನ್ನು ವರ್ಗಾಯಿಸುವ ರಾಯಭಾರಿಯಾಗಿ ಸಲ್ಲುತ್ತಾರೆ ಅವರು.

ಜನಪದ ಗದ್ಯ ಕೃತಿಗಳು :

ಜಾನಪದಕ್ಕೆ ಸಂಬಂಧಿಸಿ ಡಾ. ನಾಯಕರು ಗದ್ಯ ಗ್ರಂಥಗಳನ್ನು ನೀಡಿದ್ದಾರೆ. ಇವೆಲ್ಲ ಸಂಶೋಧನೆ, ವಿಶ್ಲೇಷಣೆ, ಸಮೀಕ್ಷೆ, ವಿವರಣೆಯ ರೂಪದಲ್ಲಿವೆ. ಇವನ್ನು ಸಂಶೋಧನಾ ಪ್ರಬಂಧಗಳು, ಪ್ರಬಂಧ ಮತ್ತು ಭಾಷಣಗಳು, ಸಂಕಲನಗಳು, ಜನಾಂಗಿಕ ಅಧ್ಯಯನ ಗ್ರಂಥಗಳು, ಅನುಭವ ಕಥನಗಳು ಎಂಬುದಾಗಿ ವರ್ಗೀಕರಿಸಬಹುದು.

ಅ)ಸಂಶೋಧನಾ ಪ್ರಬಂಧಗಳು : ಕಾರವಾರ ಜಿಲ್ಲೆಯ ಜನಪದ ಗೀತಗಳು (1982), ಕನ್ನಡ ಬಯಲಾಟ ಪರಂಪರೆ (1982), ಕರ್ನಾಟಕದ ಶಕ್ತಿ ದೇವತೆಗಳು(1983), ಶಿರಸಿ ಮಾರಿಕಾಂಬೆ ಮತ್ತು ಜಾತ್ರೆ (1996) –ಇವು ನಾಲ್ಕು ಈ ವರ್ಗಕ್ಕೆ ಸೇರಿದ ಗ್ರಂಥಗಳು.

ಇವುಗಳಲ್ಲಿ ಬಹಳ ಪ್ರಮುಖವಾದುದು 'ಕಾರವಾರ ಜಿಲ್ಲೆಯ ಜನಪದ ಗೀತಗಳು' ಇದು ಪಿಹೆಚ್.ಡಿ ಮಹಾಪ್ರಬಂಧ. "ಇಲ್ಲಿಯ ಜನತೆಯ ಸಂಸ್ಕೃತಿ ಹಾಗೂ ಈ ಗೀತೆಗಳಿಗೆ ಹಿನ್ನೆಲೆಯಾಗಿರುವ ರೂಢಿ, ನಂಬಿಕೆ, ಸಂಪ್ರದಾಯವನ್ನು ಪರಿಶೀಲಿಸಿ ಗೀತೆಗಳ ಸಾಹಿತ್ಯಕ ಮೌಲ್ಯಗಳನ್ನು ನಿರ್ಣಯಿಸಿ ಅವುಗಳ ವೈವಿಧ್ಯವನ್ನು, ವೈಶಿಷ್ಟ್ಯವನ್ನು ಎತ್ತಿ ತೋರಿಸುವುದೇ ಈ ಪ್ರಬಂಧದ ಉದ್ದೇಶ"– ಇದು ಗ್ರಂಥದ ಪ್ರಸ್ತಾವನೆಯಲ್ಲಿ ಡಾ.ನಾಯಕರು ಹೇಳಿದ ಮಾತು. ಜಿಲ್ಲೆಯ ಜನಪದ ಸಂಸ್ಕೃತಿಯ ಅನೇಕ ಅಂಶಗಳನ್ನು ಈ ಗ್ರಂಥ ದಾಖಲಿಸುತ್ತದೆ.

ಪೀಠಿಕೆ, ಸಮಾರೋಪ ಸಹಿತ ಒಟ್ಟಿಗೆ ಹತ್ತು ಅಧ್ಯಾಯಗಳಿವೆ. ಭಕ್ತಿ ಗೀತೆಗಳು, ಮಂಗಲಗೀತೆಗಳು, ಕೌಟುಂಬಿಕ ಹಾಗೂ ಲೋಕ ರೀತಿ–ನೀತಿಯ ಗೀತೆಗಳು, ಕಥನ ಕವನಗಳು, ಶಿಶುಗೀತೆಗಳು, ಗಂಡಸರ ಪದಗಳು, ನೃತ್ಯಗಳು, ಹಾಗೂ ಶೈಲಿ – ಹೀಗೆ ವಿಭಾಗಿಸಿಕೊಳ್ಳಲಾಗಿದೆ. ಪ್ರಸ್ತಾವನೆಯಲ್ಲಿ ಜನಪದ, ಅದರ ಅರ್ಥ ನಿಷ್ಪತ್ತಿ ಹೇಳಿದ್ದಾರೆ. ಅದು ಬೆಳೆದು ಬಂದ ಬಗೆಯನ್ನು ವಿವರಿಸಿದ್ದಾರೆ. ಕನ್ನಡದಲ್ಲಿ ಬೆಳೆದು ಬಂದ ಬಗೆಯನ್ನು ಗುರುತಿಸಿದ್ದಾರೆ. ಉತ್ತರಕನ್ನಡ ಜಿಲ್ಲೆಯ ವಿವಿಧ ಜನಾಂಗಗಳ ಸಾಂಸ್ಕೃತಿಕ ಪರಿಚಯ ಕೊಟ್ಟಿದ್ದಾರೆ. ಮುಂದಿನ ಅಧ್ಯಾಯಗಳಲ್ಲಿ ಜನಪದರ ಬದುಕಿನ ಬಗೆಗಳನ್ನು ಸಮಾಲೋಚಿಸಿದ್ದಾರೆ. ಹಾಗೆ ಸಮಾಲೋಚಿಸುವಾಗ ಅವರ ಗೀತೆಗಳನ್ನೇ ಆಕರವಾಗಿಟ್ಟುಕೊಂಡಿದ್ದಾರೆ. ಜನಪದರ ಬದುಕಿನ ಮೂಲಸ್ಥಾಯಿ ಭಕ್ತಿ ಎಂಬುದನ್ನು ಸಾಧಾರವಾಗಿ ವಿವೇಚಿಸುತ್ತಾರೆ, ಜಿಲ್ಲೆಯ ಜನಪದಕ್ಕೆ ಇದು ಆಕರ ಗ್ರಂಥ. 'ಕನ್ನಡ ಬಯಲಾಟ ಪರಂಪರೆ'ಯಲ್ಲಿ ಯಕ್ಷಗಾನವು ಜನಪದರ ಮಹಾವೇದವು, ಅದು ಶುದ್ಧ ದ್ರಾವಿಡ ಕಲೆ ಅನ್ನುತ್ತಾರೆ ನಾಯಕರು. ಯಕ್ಷಗಾನದ ಸ್ವರೂಪ, ಅಂಗಾಂಗ ವೈವಿಧ್ಯಗಳ ಬಗ್ಗೆ ವಿಶ್ಲೇಷಿಸಿದ್ದಾರೆ. ಅದರ ಸಾಹಿತ್ಯದ ಕುರಿತು ಚರ್ಚಿಸಿದ್ದಾರೆ. ಜನಪದವಾಗಿದ್ದ ಈ ಕಲೆಗೆ ಶಾಸ್ತ್ರೀಯತೆ ಕೊಟ್ಟು ಅನಗತ್ಯ ಸುಧಾರಣೆ ತಂದು ಜನರಿಂದ ದೂರಮಾಡುತ್ತಿದ್ದಾರೆ ಅನ್ನುತ್ತಾರೆ. 'ಯಕ್ಷಗಾನ ಮತ್ತು ದೊಡ್ಡಾಟ' ಪ್ರಬಂಧದಲ್ಲಿ ಎರಡನ್ನೂ ತೌಲನಿಕವಾಗಿ ನೋಡಲಾಗಿದೆ.

ಆ) ಪ್ರಬಂಧ ಮತ್ತು ಭಾಷಣ ಸಂಕಲನ ಕೃತಿಗಳು : ಜಾನಪದ ಸಿಂಹಾವಲೋಕನ (1985); ಜಾನಪದ ಮೆಲುಕು (1987), ಜಾನಪದ ಸಂಬಾರ ಬಟ್ಟಲು (1992), ಜಾನಪದ ಕವಳ ಪೇಳಿ(1997); ಉತ್ತರ ಕನ್ನಡ ಸಂಸ್ಕೃತಿ(1994), ಕರಾವಳಿ ಸೋಗುಗಳ ಬಹುರೂಪ(1998), ಹಾಲಕ್ಕಿ ಒಕ್ಕಲಿಗರ ಜನಪದ ಗೀತಗಳು (1982), ಬುಡಕಟ್ಟು ಜನಾಂಗಗಳ ಜಾನಪದ(1989)–ಇವು ಎಂಟು ಈ ವರ್ಗಕ್ಕೆ ಸೇರಿದ ಕೃತಿಗಳಾಗಿವೆ.

ಜಾನಪದಕ್ಕೆ ಸಂಬಂಧಿಸಿ ಬೇರೆ ಬೇರೆ ವಿಷಯಗಳ ಕುರಿತು ಬರೆದ ಪ್ರಬಂದಗಳು ಇಲ್ಲಿವೆ. ಭಾಷಣಗಳ ಸಂಗ್ರಹವೂ ಇದೆ. ಸಾಕಷ್ಟು ಮಾಹಿತಿಗಳನ್ನು ಇಲ್ಲಿ ಸಂಗ್ರಹಿಸಿ ಕೊಟ್ಟಿದ್ದಾರೆ. ಅವುಗಳನ್ನು ಸಮೀಕ್ಷಿಸಿದ್ದಾರೆ. ಚರ್ಚಿಸಿದ್ದಾರೆ. ಜನಪದರ ರೀತಿ-ರಿವಾಜುಗಳನ್ನು ಬೆಳಕಿಗೆ ಹಿಡಿದಿದ್ದಾರೆ. ನಂಬಿಕೆ ಆಚರಣೆಗಳ ಹಿಂದಿರುವ ಅವರ ಜೀವಪರ ಕಾಳಜಿಯನ್ನು ತೋರಿಸಿದ್ದಾರೆ. ಅವರು ಕಂಡ ಜೀವನ ಮೌಲ್ಯಗಳನ್ನು ವಿವರಿಸಿದ್ದಾರೆ. ಜನಪದರ ಬದುಕು ಹೇಗೆ ಆರೋಗ್ಯಕರವಾಗಿದೆ ಎಂಬುವುದರ ಬಗ್ಗೆ ಗಮನ ಸೆಳೆಯುತ್ತಾರೆ. ಅವರ ಬಗ್ಗೆ ಸುಧಾರಿತ ಸಮಾಜದ ಕಣ್ಣು ತೆರೆಯಿಸುತ್ತಾರೆ. ಡಾ.ನಾಯಕರು ಜನಪದರ ಸಂಸ್ಕೃತಿಯನ್ನು ಕಂಡ ರೀತಿ ಅದ್ಭುತವಾಗಿದೆ.

ಇ) ಜನಾಂಗಿಕ ಅಧ್ಯಯನ ಗ್ರಂಥಗಳು : ಉತ್ತರ ಕನ್ನಡ ಜಿಲ್ಲೆಯ ಸಿದ್ದಿ ಜನಾಂಗ (1992), ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ (1993), ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ (2001) ಗಾಮೊಕ್ಕಲು ಒಂದು ಸಾಂಸ್ಕೃತಿಕ ಅಧ್ಯಯನ (2004)-ಇವು ನಾಲ್ಕು ಡಾ. ನಾಯಕರ ಇತ್ತೀಚಿನ ಜನಾಂಗಿಕ ಅಧ್ಯಯನ ಗ್ರಂಥಗಳಾಗಿವೆ.

ಸಿದ್ಧಿ ಜನವರ್ಗ ಆಫ್ರಿಕಾದ ಮೂಲನಿವಾಸಿಗಳು. ಈ ನಿಗ್ರೋಗಳು ಗುಲಾಮರಾಗಿ ಭಾರತಕ್ಕೆ ಬಂದವರು. ವಿದೇಶಿಯ ಬುಡಕಟ್ಟಿಗೆ ಸೇರಿದ ಈ ಗಿರಿನಿವಾಸಿಗಳ ಸಂಕ್ಷಿಪ್ತ ಪರಿಚಯವಿದೆ. 'ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿಯಲ್ಲಿ' ಹಾಲಕ್ಕಿ ಒಕ್ಕಲಿಗರ ಕುರಿತ ಪ್ರೌಢ ಅಧ್ಯಯನವಿದೆ. ಹಾಲಕ್ಕಿ ಜನಾಂಗದ ಮೂಲಸ್ಥಾನ, ಜನಾಂಗ ವಿಸ್ತಾರ, ಹೆಸರಿನ ವೈಶಿಷ್ಟ್ಯ ಈ ಬಗ್ಗೆ ವಿವರಿಸಲಾಗಿದೆ. ಅವರ ಸಾಮಾಜಿಕ ವ್ಯವಸ್ಥೆಯ ಬಗ್ಗೆ ಹೇಳಲಾಗಿದೆ. ವಾರ್ಷಿಕ ಹಬ್ಬಗಳು, ದೈವಾರಾಧನೆ, ಮಾಂತ್ರಿಕ ಉಪಾಸನೆಗಳ ಬಗ್ಗೆ ಚರ್ಚಿಸಲಾಗಿದೆ. ಸುಗ್ಗಿ, ಗುಮಟೆ, ಬಯಲಾಟ, ಸಣ್ಣಾಟ, ಪುಗಡಿ, ಬೆಂದ್ರುಂಡೆ- ಇತ್ಯಾದಿ ಕುಣಿತ ಕಲೆಗಳನ್ನು

ಪರಿಚಯಿಸಲಾಗಿದೆ. ಅವರ ಸಂಸ್ಕೃತಿ, ಭಾಷೆ, ಸಾಹಿತ್ಯವನ್ನು ವಿಶ್ಲೇಷಣೆ ಮಾಡಲಾಗಿದೆ. 'ಉತ್ತರ ಕನ್ನಡ ಜಿಲ್ಲೆಯ ನಾಡವರ ಸಂಸ್ಕೃತಿ'ಯು ಇಲ್ಲಿಯ ನಾಡವ ಜನಾಂಗವನ್ನು ಪರಿಚಯಿಸುತ್ತದೆ. ಅವರ ಚಾರಿತ್ರಿಕ ಹಿನ್ನೆಲೆಯನ್ನು ಹೇಳಿದ್ದಾರೆ. ಅವರ ಸಾಮಾಜಿಕ ವ್ಯವಸ್ಥೆ, ಸಂಸ್ಕಾರ ವಿಧಿಗಳನ್ನು ವಿವರಿಸಿದ್ದಾರೆ. ದೇವರು ಮತ್ತು ಧಾರ್ಮಿಕ ಆಚರಣೆಗಳ ಬಗ್ಗೆ ವಿವರ ಕೊಟ್ಟಿದ್ದಾರೆ. ಕಲೆ–ಕ್ರೀಡೆಗಳನ್ನು ಪರಿಚಯಿಸಿದ್ದಾರೆ. ಭಾಷೆ–ಸಾಹಿತ್ಯವನ್ನು ಅವಲೋಕಿಸಿದ್ದಾರೆ. ವಿಭಿನ್ನ ಕ್ಷೇತ್ರಗಳ ಸಾಧಕರನ್ನು ಪರಿಚಯಿಸಿದ್ದಾರೆ. ಗಾಮೊಕ್ಕಲು ಉತ್ತರ ಕನ್ನಡ ಜಿಲ್ಲೆಯ ಇನ್ನೊಂದು ಪ್ರಮುಖ ಜನಾಂಗ. 'ಗಾಮೊಕ್ಕಲು ಒಂದು ಸಾಂಸ್ಕೃತಿಕ ಅಧ್ಯಯನ' ಈ ಜನವರ್ಗವನ್ನು, ಅವರ ಸಂಸ್ಕೃತಿಯನ್ನು ವಿವರವಾಗಿ ಪರಿಚಯಿಸುತ್ತದೆ. ಅವರ ಮೂಲ, ಸ್ಥಳಾವರಣ, ಲೌಕಿಕ ಸಂಸ್ಕಾರ, ದೈವೋಪಾಸನೆ, ಹಬ್ಬಗಳ ಆಚರಣೆ, ಒಳಾಡಳಿತ ವ್ಯವಸ್ಥೆ, ಜೀವನ ವಿಧಾನ, ಇವನ್ನು ದರ್ಶಿಸಿದ್ದಾರೆ. ಕಲೆ–ಕ್ರೀಡೆಗಳನ್ನು ಪರಿಚಯಿಸಿದ್ದಾರೆ. ಅವರ ಭಾಷೆ–ಸಾಹಿತ್ಯವನ್ನು ಸಮೀಕ್ಷೆ ಮಾಡಿದ್ದಾರೆ. ಆಧುನಿಕ ಪ್ರಭಾವ, ಪರಿಣಾಮಗಳನ್ನು ಹೇಳಿದ್ದಾರೆ. ಆ ಜನಾಂಗದ ಜೀವಂತಿಕೆಯನ್ನು ತೆರೆದಿಟ್ಟಿದ್ದಾರೆ.

ಪತ್ನಿ ಶಾಂತಿನಾಯಕರೊಂದಿಗೆ ಸಂಪಾದಿಸಿದ ಇನ್ನೊಂದು ವಿಶಿಷ್ಟಕೃತಿ 'ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು(1979). ಜನಪದರ ಆಟಗಳ ಬಗ್ಗೆ ಮಾಹಿತಿ ಕೊಡುವ ಅಪರೂಪ ಗ್ರಂಥ ಇದು. ಹರಳಾಟಗಳು, ಬೆರಳಾಟಗಳು, ತುಳಿದಾಟಗಳು, ಸುತ್ತಾಟಗಳು, ಹುಡುಕಾಟಗಳು, ಕುಂಟಾಟಗಳು ಎಳೆದಾಟಗಳು, ಗುರಿಯಾಟಗಳು, ಬೆನ್ನಟ್ಟುವ ಆಟಗಳು, ಅನುಕರಣದ ಆಟಗಳು – ಹೀಗೆ ಹತ್ತು ವಿಭಾಗ ಮಾಡಲಾಗಿದೆ. ಒಟ್ಟೂ 132 ಬಗೆಯ ಆಟಗಳನ್ನು ಇಲ್ಲಿ ಪರಿಚಯಿಸಲಾಗಿದೆ. ಪ್ರತಿಯೊಂದು ಆಟವನ್ನು ವಿಧಾನವನ್ನು ಸಂಗ್ರಹಿಸಿ ಕೊಡಲಾಗಿದೆ. ಈ ಆಟಗಳು ನಮ್ಮ ಜನಪದರ ಉತ್ಸಾಹ, ಕ್ರಿಯಾಶೀಲತೆ, ಲವಲವಿಕೆಯನ್ನು ಹೇಳುತ್ತವೆ. ಅವರ ಮನೋಭಾವಗಳನ್ನು ಬಿಂಬಿಸುತ್ತವೆ.

ಕರಾವಳಿ ಕರ್ನಾಟಕದ ಆಹಾರ ಪದ್ಧತಿ (2009). ದೇವಿ ಹೇಳಿದ ಕಿನ್ನರ ಕಥೆಗಳು (2009) ಎಂಬ ಕೃತಿಗಳನ್ನೂ ಪ್ರಕಟಿಸಿದ್ದಾರೆ.

–ಹೀಗೆ ಡಾ. ನಾಯಕರು ಜನಪದದ ಕುರಿತು ಮಾಡಿದ ದುಡಿಮೆ ಅಪಾರ ಮತ್ತು ಅಮೂಲ್ಯ. ಅಲ್ಲಲ್ಲಿ ಇಂಗಿಹೋಗಲಿರುವ ಈ ಕೊರತೆಯನ್ನು ಬಗೆದು ಒಂದೆಡೆ ನೆಲೆಗೊಳಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

2. ಜಾನಪದೇತರ ಕೃತಿಗಳು :

ಜಾನಪದ ಡಾ. ನಾಯಕರ ಬದುಕು ನಿಜ. ಆದರೆ ಸೃಜನಶೀಲ ಸಾಹಿತ್ಯದಲ್ಲೂ ಅವರು ಪರಿಶ್ರಮವುಳ್ಳವರು. ಮುಖ್ಯವಾಗಿ ಅವರು ಕವಿ, ನಾಟಕಕಾರ, ಚಿಂತಕ, 'ವಿಮೋಚನೆ' ಅವರ ಮೊದಲ ಪ್ರಕಟಿತ ನಾಟಕಕೃತಿ. 1968ರಲ್ಲಿ ಇದು ಪ್ರಕಟವಾಯಿತು. ಸರಳ ಸ್ವರೂಪದ ನಾಟಕ. ಕಂಪನಿ ನಾಟಕ ಛಾಯೆ ಇದರದ್ದು. ಕಪ್ಪು ಬಿಳುಪು ಪಾತ್ರಗಳು. ವ್ಯಕ್ತಿಯ ಆದರ್ಶವು ಸಮಾಜದ ಪಾಲಿಗೆ ಹುಚ್ಚಾಗಿ ಕಂಡರೆ ಆಗುವ ಪರಿಣಾಮವಿದು. ಇದನ್ನು ನಾಟಕ ಚಿತ್ರಿಸುತ್ತದೆ. ಇಲ್ಲಿಯ ನಾಟಕ ಕ್ರಿಯೆ ಚುರುಕಾಗಿದೆ. ಕನ್ನಡ ಪ್ರೇಮ ನಾಟಕದ ಮೂಲ ಆಶಯವಾಗಿದೆ.

'ಚಿಂತನ ತರಂಗ' (1999) ಆಕಾಶವಾಣಿ ಪ್ರಸಾರಿತ ಚಿಂತನ ಬರೆಹಗಳ ಸಂಕಲನ. ಇಪ್ಪತ್ತು ಚಿಂತನೆಗಳು ಇಲ್ಲಿವೆ. ಇವು ವೈಚಾರಿಕವಾಗಿವೆ. ಸಮಾನತೆ–ಸಾಮರಸ್ಯವನ್ನು ಪ್ರತಿಪಾದಿಸುತ್ತವೆ. ಮಾನವೀಯ ಮೌಲ್ಯಗಳ ಕಡೆಗೆ ಗಮನ ಸೆಳೆಯುತ್ತದೆ. ನಾವೆಲ್ಲ ಒಂದೆ, ಸುಖವು ಎಲ್ಲಿದೆ. ಕೋಪ ನರಕದ ಬಾಗಿಲು, ಹುತ್ತವ ಬಡಿದರೆ ಹಾವು ಸಾಯುಬಲ್ಲದೆ, ನ್ಯಾಯಾನ್ಯಾಯ ವಿವೇಚನೆ–ಇತ್ಯಾದಿ ಮೌಲ್ಯಯುತ ಚಿಂತನೆಗಳು ಮನಸ್ಸಿಗೆ ಮುದಕೊಡುತ್ತವೆ. ಹೊಸ ವಿವರವನ್ನು ಮೂಡಿಸುತ್ತವೆ. ಜೀವಪರ ಕಾಳಜಿ ಪ್ರತಿಯೊಂದರಲ್ಲೂ ತುಂಬಿದೆ.

ದಲಿತ ಬಲಿತರಲ್ಲಿ ದ್ವೇಷ ಮನೋಭಾವನೆಯ್ನು ಕೆರಳಿಸಿ

ಕ್ರಾಂತಿಯಿಂದ ನಾವು ಸಾಧಿಸುವ ಸಮಾನತೆ ದೇಶದಲ್ಲಿ ಅಸ್ಥಿರತೆಯನ್ನೇ ಹುಟ್ಟುಹಾಕಬಹುದು (ಪುಟ:6)–ಇಂಥ ಎಚ್ಚರದ ಮಾತುಗಳು ಇಲ್ಲಿವೆ. ಅವರ ಜೀವಪ್ರೀತಿಗೆ ಇದು ಹೆಗ್ಗುರುತಾಗಿದೆ. 'ಬಾನುಲಿ ಅಲೆಗಳು', 'ಶರಣರ ಬೆಳಕಿನ ಪಥ' 2009 ರಲ್ಲಿ ಪ್ರಕಟವಾಗಿವೆ.

ಆತ್ಮಕಥನ ಗ್ರಂಥಗಳು : ಜಾನಪದ ಜಗಲಿಯಲ್ಲಿ (2002), ಕಲಿಕೆಯ ಗುಡಿಲಲ್ಲಿ (2000)–ಇವೆರಡು ಡಾ.ನಾಯಕರ ಅನುಭವ ಕಥನಗಳು. ಜಾನಪದ ಜಗಲಿಯಲ್ಲಿ ಎರಡು ಭಾಗಗಳಿವೆ. ಭಯ, ಬೆರಗು, ನಲಿವಿನ –ಮೊದಲ ಭಾಗ. ಪ್ರಾಥಮಿಕ ಶಾಲಾ ವಿದ್ಯಾಭ್ಯಾಸದ ವರೆಗಿನ ತಮ್ಮ ಬಾಲ್ಯ ಜೀವನ ಅನುಭವಗಳನ್ನು ಇಲ್ಲಿ ಹೇಳಿದ್ದಾರೆ. ನೆರಳು ಬೆಳಕಿನ ಸಂಗ–ಇದು ಎರಡನೇ ಭಾಗ. ಇದರಲ್ಲಿ 36 ಬರೆಹಗಳಿವೆ. ಮುಖ್ಯವಾಗಿ ಜಾನಪದ ಕ್ಷೇತ್ರಕಾರ್ಯ, ಸಾಹಿತ್ಯ ಸಂಗ್ರಹ, ಪ್ರಕಟನೆ ಇತ್ಯಾದಿಗಳನ್ನು ಕುರಿತು ಬರೆದಿದ್ದಾರೆ. ಇವನ್ನು ಘಟನಾತ್ಮಕವಾಗಿ ಹೇಳಿದ್ದಾರೆ. ಸರಳವಾಗಿ, ಸೊಗಸಾಗಿ ನಿರೂಪಿಸಿದ್ದಾರೆ. ಆ ಕಾಲದ ಅನೇಕ ಸಂಗತಿಗಳನ್ನು ಇಲ್ಲಿ ದಾಖಲಿಸಲಾಗಿದೆ. ಗ್ರಾಮೀಣರ ಬದುಕಿನ ಚಿತ್ರಣವೂ ಇಲ್ಲಿ ಸಿಗುತ್ತದೆ. ಜನಪದರ ಮನೋಭಾವವೂ ಪರಿಚಯವಾಗುತ್ತದೆ.

'ಕಲಿಕೆಯ ಗುಡಿಲಲ್ಲಿ' ಕೃತಿಯಲ್ಲಿ ಡಾ.ನಾಯಕರು ತಮ್ಮ ಇಡೀ ವಿದ್ಯಾರ್ಥಿ ಜೀವನದ ಅನುಭವವನ್ನು ಚಿತ್ರಿಸಿದ್ದಾರೆ. 39 ಬರೆಹ ಇಲ್ಲಿವೆ. ಕನ್ನಡ ಶಾಲೆಯ ಅಂಗಳದಲ್ಲಿ, ಇಂಗ್ಲಿಷ್ ಶಾಲೆಯ ಚೌಕಿಯಲ್ಲಿ, ಕಾಲೇಜಿನ ಪಡಸಾಲೆಯಲ್ಲಿ, ವಿಶ್ವವಿದ್ಯಾಲಯದ ಅಟ್ಟದಲ್ಲಿ –ಹೀಗೆ ನಾಲ್ಕು ವಿಭಾಗಗಳು ಇಲ್ಲಿವೆ. ಆ ಕಾಲದ ಶಿಕ್ಷಣ ವ್ಯವಸ್ಥೆಯನ್ನು ವರ್ಣಿಸಿದ್ದಾರೆ. ಅಧ್ಯಾಪಕರ ಸ್ವಭಾವಗಳನ್ನು ಪರಿಚಯಿಸಿದ್ದಾರೆ. ಸಾಮಾಜಿಕ ವಾತಾವರಣ ಹೇಗಿತ್ತು– ಅದನ್ನು ಹೇಳಿದ್ದಾರೆ. ಹಳ್ಳಿಯ ಒಬ್ಬ ವಿದ್ಯಾರ್ಥಿಗೆ ಎದುರಾದ ಸಮಸ್ಯೆಗಳು, ಅವನ್ನು ನಿಭಾಯಿಸಿದ ರೀತಿ–ಇವನ್ನೆಲ್ಲ ಯಥಾವತ್ತಾಗಿ ನಿರೂಪಿಸಿದ್ದಾರೆ. ದುಡಿಮೆಯನ್ನು ಪ್ರೀತಿಸುತ್ತ, ಅವರು ಕಲಿಕೆಯಲ್ಲಿ ಸಾಧಿಸಿದ ಉನ್ನತಿ

ಮಾದರಿಯಾದುದು. ಸ್ವಾಭಿಮಾನ, ಸತತ ಪ್ರಯತ್ನ ಮತ್ತು ಉನ್ನತ ಗುರಿ ವ್ಯಕ್ತಿಗೆ ಶ್ರೇಯಸ್ಸನ್ನು ತಂದು ಕೊಡುತ್ತವೆ ಎಂಬುದಕ್ಕೆ ಡಾ.ನಾಯಕರು ನಿದರ್ಶನವಾಗುತ್ತಾರೆ.

ಗಂಗೋತ್ರಿ, ಕರ್ನಾಟಕ ಬುಡಕಟ್ಟುಗಳು, ಗುಣ ಗೌರವ, ನಿಲಾಂಜನ, ಸೌಹಾರ್ದ ಸಂಗಮ–ಇವು ಐದು ಡಾ.ನಾಯಕರು ಸಂಪಾದಕರಾಗಿ ಹೊರ ತಂದ ಕೃತಿಗಳಾಗಿವೆ. ಕವಿಯಾಗಿ ಡಾ.ನಾಯಕರು ಕಾವ್ಯರಸಿಕರ ಹೃದಯ ತುಂಬಿಕೊಂಡವರು 'ಕಾದು ಅರಳು'(1981), 'ಹಂಸಪಥ' (2001), 'ಕಾಡು ಹಾಡು'(2005), 'ನೂರು ಪದ ನೂರು ಹದ' (2007)–ಇವು ನಾಲ್ಕು ಕವನ ಸಂಕಲನಗಳನ್ನು ಇತ್ತಿದ್ದಾರೆ. 'ಮುರುಡ ಅರಳು' 2009 ರಲ್ಲಿ ಪ್ರಕಟವಾಗಿದೆ.

ಡಾ.ನಾಯಕರು ಸಹಜ ಕವಿ. ಬದುಕನ್ನು ಪ್ರೀತಿಸಿದ ಕವಿ. ಅವರು ಬದುಕನ್ನು ಪರಿಭಾವಿಸುವ ಪರಿ ಸೊಗಸಾಗಿದೆ. ಅವರ ಹೆಚ್ಚಿನ ಕವನಗಳು ಛಂದೋಬದ್ಧವಾಗಿವೆ. ಗೇಯತೆಯನ್ನು ಪಡೆದಿವೆ. ಕಾವ್ಯಪಂಥದ ಯಾವುದೇ ಒತ್ತಡಕ್ಕೆ ಅವರು ಸಿಲುಕಿಲ್ಲ. ನಿರಾಳವಾಗಿ ಬರೆಯ ಬಲ್ಲವರು. ಹೊಳೆದುದನ್ನು ಹೊಳೆಯಿಸುವುದೇ ಅವರ ಪರಿ. ಅದಕ್ಕಾಗಿಯೇ ಅವರ ಕವನಗಳು ಸೊಗಸುಗಟ್ಟಿದ ಗರಿಯಾಗಿ ಶೋಭಿಸುತ್ತವೆ. ಅವರ ಕಾವ್ಯ ಕಲ್ಪನೆ ಉದಾತ್ತವಾದುದು. ಜೀವಸ್ಪಂದನಶಕ್ತಿ ಅಲ್ಲಿ ಕಾಣುತ್ತದೆ.

ತಮ್ಮ ಕಾವ್ಯದ ಬಗ್ಗೆ ಅವರು ಹೀಗೆ ಹೇಳುತ್ತಾರೆ :

ಬೇಕಾದರಿದ ಎದೆಗೊತ್ತಿಕೊಳ್ಳಿ ಇಲ್ಲದಿರೆ
ಹೂತು ಬಿಡಿ ನೀವು ಎದೆಗೂಡಸಂದಿಯಲಿ
ಕಾಡು ಹಾಡಾದರೂ ಹಾಡದಿರೆ ನಾನು
ಹಾಡಿಯೆದೆ ಹಗುರ ಮಾಡುವುದೆನಗೆ ರೂಢಿ

(ಕಾಡು ಹಾಡು : ಪುಟ : 2)

–ಕವಿಗಿರುವುದು ಒಳಗಿನ ಒತ್ತಡ. ಒಳಗಿನ ಭಾವನೆಯನ್ನು

ಹೊರಹಾಕದೆ ಅವನಿಗೆ ಸುಖವಿಲ್ಲ. ಇತರರಿಗೆ ಇಷ್ಟವಾಗಲಿ ಬಿಡಲಿ, ತನಗಿದು ಅನಿವಾರ್ಯ ಅನ್ನುತ್ತಾರೆ ಕವಿ ಇಲ್ಲಿ. ಇದು ಆತ್ಮಗೌರವವೂ ಹೌದು.

'ಕಾದು ಅರಳು' ಸಂಕಲ್ಪದಲ್ಲಿ 27 ಕವನಗಳಿವೆ.

ಕಾದಬೇಕು ತಮ್ಮಾ ಈ ಬದುಕಿನಲ್ಲಿ
ಮತ್ತೆ ಕಾಯಬೇಕು–ಕಾದು ಅರಳಬೇಕು
ಕೆರಳಿ ಕಾದು ಅರಳಿ ಪರಿಮಳಿಸಬೇಕು
ಉರಿಸಿಂಗಿಯಂತೆ ಕೆರಳಿ ಉರಿದುರಿದು
ತನ್ನ ತಾನೆ ಕಚ್ಚಿ ಹರಿದುಕೊಳ್ಳಬಾರದಪ್ಪ
ಸುಟ್ಟು ಸಾಯಬಾರದಪ್ಪ ಕಿಚ್ಚ ಕೀಳಿಯಂತೆ

(ಕಾದು ಅರಳು : ಪುಟ :42)

ಈ ಸಾಲುಗಳಲ್ಲಿ ಕೊಡುವ ಅರಿವು ಹಿರಿದಾದುದು. ಅವರಸರದ ಬದುಕು ವಿನಾಶವನ್ನೇ ತರುತ್ತದೆ. ಹಂಬಲಿಸಿದ ಕೂಡಲೇ ಯಾವುದೂ ಸಲ್ಲುವುದಿಲ್ಲ. ಒಳಿತನ್ನು ಹಂಬಲಿಸಬೇಕು. ಅದಕ್ಕಾಗಿ ಕಾಯಬೇಕು. 'ಕಾದು–ಅರಳು' ನುಡಿ ಪ್ರಯೋಗ ಅರ್ಥಭರಿತವಾಗಿದೆ. ಕಾಯುವುದರಲ್ಲಿ ಬದುಕಿನ ಸೊಗಸು ಇದೆ, ಪರಿಪಕ್ವತೆಯಿದೆ. ಕವಿ ಅದನ್ನು ಇಲ್ಲಿ ಧ್ವನಿಸಿದ್ದಾರೆ. ಉರಿಸಿಂಗಿ, ಕಿಚ್ಚಕೀಳಿ – ಇಂಥ ನುಡಿಗಟ್ಟುಗಳು ಧ್ವನಿಶಕ್ತಿಯಾಗಿ ಬಂದಿವೆ. 'ಹಂಸಪಥ' ದಲ್ಲಿ 66 ಕವನಗಳಿವೆ. ಹಂಸಪಥ ಶೀರ್ಷಿಕೆಯ ಕವನ 166 ದ್ವಿಪದಿಗಳನ್ನು ಹೊಂದಿರುವ ದೀರ್ಘಕವನವಾಗಿದೆ. ಜೀವನ ತತ್ತ್ವವನ್ನು ಇದು ನಿರೂಪಿಸುತ್ತದೆ. ಊರ್ಧ್ವಮುಖಿಯಾಗುತ್ತದೆ. ಅಧ್ಯಾತ್ಮದೆಡೆಗೆ ನೆಗೆಯುತ್ತದೆ.

ಸಾಗು ಸಾಗು ಹೃದಯ ಹಂಸ ಬನ್ನ ಬವಣೆ ಬರಲಿ ಒಮ್ಮೆ
ನೆರವು ನಿಲಲಿ ನಯನದೆದುರು ಒಂದೆ ಗತಿಯು ನಿನ್ನ ಪಾಡಿಗೆ

(ಪುಟ :79)

ಹೃದಯ ಹಂಸ ಅಂತರ್ಮುಖಿಯಾಗಬೇಕು; ಶ್ರೇಯಸ್ಸಿನಡೆಗೆ ತುಡಿಯಬೇಕು– ಎಂಬ ಭಾವ ಇಲ್ಲಿದೆ. ಕವಿ ತನ್ನೊಳಗಿನ ಚೈತನ್ಯವನ್ನು ಹಂಸವಾಗಿ ಕಂಡಿದ್ದಾರೆ. ಎಲ್ಲರ ಚೈತನ್ಯವೂ ಹಂಸವಾಗಬೇಕು ಎಂಬ ಹಂಬಲ ಇಲ್ಲಿದೆ.

ಪಾಪ ಜನ್ಮವಲ್ಲ ನೀನು ತಪನ ತಾಪ ಭುವಿಯ ಸತ್ವ
ಚಂದ್ರ ತಂಪಿನಿಂದ ಬಂದ ನೀನು ಶಾಂತ ಪುಣ್ಯ ಕುಡಿಯೆಲೆ
(ಪುಟ : 90)

–ಎಂಬ ಮಾತು ವ್ಯಕ್ತಿಗಿರಬೇಕಾದ ಆತ್ಮಗೌರವವನ್ನು ಸೂಚಿಸುತ್ತದೆ.

ವಿಶ್ವವನ್ನೆ ತಬ್ಬು ಉಬ್ಬು ದ್ವೇಷ ಬೇಡ ಸ್ವಾರ್ಥ ಸಾಕು
ವಿಶ್ವಬಂಧು ಲೋಕಪ್ರೇಮಿ ಕರುಣಸಿಂಧುವಾಗು ಹಂಸವೇ
(ಪುಟ:91)

–ಮನುಷ್ಯ ವಿಶ್ವಪ್ರೇಮಿಯಾಗುವುದಕ್ಕೆ ಒತ್ತುಕೊಡುತ್ತದೆ ಈ ಸೊಲ್ಲು. ಅರಿವಿನ ಬೆಳಕು ಅರಳಲಿ ಅನ್ನುತ್ತದೆ. ವಿಶ್ವಪ್ರೇಮಕ್ಕಿಂತ ದೊಡ್ಡದು ಮಾನವ ಜೀವಕ್ಕೆ ಬೇರೇನೂ ಇಲ್ಲ. ಒಳ್ಳೆಯದೆಲ್ಲವೂ ಹಂಸಪಥವೆ. ಕವಿ ತೋರಿದ ಈ ಹಂಸಪಥ ಉದಾತ್ತವಾದುದಾಗಿದೆ. ಸರ್ವೋದ್ಧಾರದ್ದಾಗಿದೆ. "ದೇಹ ಭಾವವಳಿದು ಜ್ಯೋತಿಗೋಲ ಬೆಳಗಲಿ" ಎಂಬ ನುಡಿ ಅಧ್ಯಾತ್ಮದ್ದಾಗಿದೆ.

ಈ ಪ್ರಪಂಚದಲ್ಲಿ ಯಾವುದೂ ನಗಣ್ಯವಲ್ಲ. ಅದರಷ್ಟಕ್ಕೆ ಅದು ಸ್ವಯಂಪೂರ್ಣ. ಮಿಂಚುಹುಳ ಆ ಅನುಭವ ಕೊಡುತ್ತದೆ :

ಹೆರರ ಬೆಳಕಿಗೆ ನಿಲದೆ ನಿನ್ನ ಎದೆಯನೆ ಉರಿಸಿ
ನಿನಗೆ ನೀ ಬೆಳಕಾಗಿ ಮೇಲೇರಿ ಹಾರು ಹುಳ
ನೀನೆತ್ತ ನಡೆದಿರುವೆಯೇ (ಬಿಂಜು ಮುಳು : ಪುಟ 1)–ಎಂದು ಪ್ರಶ್ನಿಸುತ್ತಾರೆ.

ಅವರವರೊಳಗೆ ಅವರವರು ಬೆಳಕನ್ನು ಕಂಡುಕೊಳ್ಳಬೇಕು. ಬೆಳಕು ಅವರವರ ಒಳಗೇ ಇದೆ. ಆ ಅರಿವಿಗೆ ಮಿಂಚುಹುಳ ಇಲ್ಲಿ ಪ್ರತಿಮೆಯಾಗಿದೆ.

'ಕಾಡು ಹಾಡು' ಸಂಕಲನದಲ್ಲಿ 102 ಕವನಗಳಿವೆ. 9 ಸಾಲುಗಳಲ್ಲಿ ಇವನ್ನು ವರ್ಗೀಕರಿಸಲಾಗಿದೆ. ವಿಚಾರ ಮತ್ತು ಭಾವ ಸೌಂದರ್ಯದಿಂದ ಈ ಇಲ್ಲಿಯ ಕವನಗಳು ಶೋಭಿಸುತ್ತವೆ.

ಹಣ್ಣು ವಾಸನೆ ಮೂಸಿ ಚಪ್ಪರಿಸಿ ನೋಡಿ
ಇಲ್ಲದಿರೆ ತೂರಿಬಿಡಿ ಬೆಳೆವ ಬಯಲಿನಲಿ

(ಕಾಡು ಹಾಡು–2)

–ಇಲ್ಲಿ ಕವಿ ತಮ್ಮ ಕಾವ್ಯವನ್ನು ಹಣ್ಣಿಗೆ ಹೋಲಿಸಿದ್ದಾರೆ. ಎಲ್ಲ ಹಣ್ಣು ಎಲ್ಲರಿಗೂ ರುಚಿಸುವುದಿಲ್ಲ. ಕಾವ್ಯವೂ ಕೂಡ ಹಾಗೆ. ಇಷ್ಟವಾಗದಿದ್ದರೆ ಬಯಲಿಗೆ ತೂರಿ ಅನ್ನುತ್ತಾರೆ. ಅಲ್ಲಿ ಅದು ಏನಾಗ ಬೇಕು ? ಕವಿ ಹೇಳುತ್ತಾರೆ :

ತೊಳೆದು ಗೊಬ್ಬರವಾಗಿ ಭೂಮಿಯೆದೆ ಬೆರೆತು
ಮೊಳೆಯುವುದು ಮೊಳಕೆ ಹಸಿರು ಎಲೆ ಹೂ ಹಣ್ಣು

(ಅದೇ ಕವನ)

–ಹೀಗೂ ಅದು ಸಾರವಾಗಿ ಸಲ್ಲಲಿ ಎಂಬ ಭಾವ ಇಲ್ಲಿ ಶ್ರೇಷ್ಠವಾದುದು. ಆ ಬಯಲ ಹಸುರನು ಕಾಡುಮಿಗ, ಖಗ ಮೇಯಲಿ ಅನ್ನುತ್ತಾರೆ. ಯಾವುದೂ ಇಲ್ಲಿ ಹಾಳಲ್ಲ ಎಂಬ ಅರಿವಿಗೆ ಈ ಸೊಲ್ಲು ತೆರೆದುಕೊಳ್ಳುತ್ತದೆ.

ಈ ಸಮಾಜ ಹೇಗೆ ? ಆ ಸತ್ಯದ ಕಡೆಗೆ ಕವಿ ನಮ್ಮನ್ನು ಹೊರಳಿಸುತ್ತಾರೆ :

ದುಡ್ಕೊಂಡ್ ಮಡಿಕೊಂಡ್ ತಿಂಬೋರ್ಕಿಂತ
ಬಡ್ಕೊಂಡ್ ಕಸ್ಕೊಂಡ್ ತಿಂಬೋರ್ ಹೆಚ್ಚು
ಆಡ್ಕೊಂಡ್ ಕೂಡ್ಕೊಂಡ್ ಬಾಳೋರ್ಕಿಂತ
ದೂಡ್ಕೊಂಡ್ ಕಾಡ್ಕೊಂಡ್ ಬಾಳೋರ್ ಹೆಚ್ಚು

(ಕಾಡು ಹಾಡು : ಯಾರ್ ಹೆಚ್ಚು : ಪುಟ–22)

–ಜನರಿಗೆ ಪ್ರಾಮಾಣಿಕ ಜೀವನ ಬೇಕಾಗಿಲ್ಲ. ದುಡಿಮೆ ಇಷ್ಟವಿಲ್ಲ. ಮೋಸ ವಂಚನೆಯೇ ನಿತ್ಯದ ಬದುಕಾಗಿದೆ. ಗಂಡಾಗುಂಡಿ ಮಾಡಿ ಗಡಿಗೆ ತುಪ್ಪ ತಿನ್ನುವ ಬುದ್ಧಿ. ಮೌಲ್ಯ ಬಿಕಾರಿಯಾಗಿದೆ.

ನೂರು ಪದ ನೂರು ಹದ 'ಸಂಕಲನದಲ್ಲಿ ನೂರು ಕವನಗಳಿವೆ. ಎಂಟು ಹದಗಳಾಗಿ ವಿಭಾಗಿಸಲಾಗಿದೆ. ಈ ಕವನಗಳಲ್ಲಿ ಕಾಣುವುದೂ ಜೀವಪರ ಕಾಳಜಿಯೆ. ಬದುಕು ಸೋತು ಹೋದ ಬಗ್ಗೆ ಕವಿಗೆ ವಿಷಾದವಿದೆ. ಮೌಲ್ಯಗಳು ಕಾಣೆಯಾದ ಬಗ್ಗೆ ದುಗುಡವಿದೆ. ಹಸುರು ಬೆಳೆಯಬೇಕಾದಲ್ಲಿ ಬೆಂಕಿ ಉರಿಯುತ್ತಿದೆ. ನಮ್ಮ ವೈಜ್ಞಾನಿಕ ಬೆಳವಣಿಗೆ ನಮ್ಮನ್ನು ಮನುಷ್ಯರಾಗಿಸಲೇ ಇಲ್ಲ. ಬುದ್ಧಿ ವಿಕಾಸವಾಯಿತು, ನಿಜ. ಆದರೆ ಹೃದಯ ಪ್ರಕಾಶಗೊಳ್ಳಲಿಲ್ಲ.

ಸಲಿಕೆ ಗುದ್ದಲಿ ಹಿಡಿದು ಅಗೆಯದಿರು ಗೋರಿಯನು
ಮಸ್ಜಿದ್ದು ಮಂದಿರದ ನೆಲಗೆಟ್ಟ ತಳವನ್ನು
.........ಬಾಯಿಲ್ಲಿ ಊಳು ಹೊಲ
ಉಣಿಸುಗೊಬ್ಬರ ಹಿಡಿಬೀಜ ಬಿತ್ತಿ ಬಿಡು (ನೆಡುಗಿಡವ ತಂಪಾಡಲಿ)–

ಎನ್ನುತ್ತಾರೆ ಕವಿ. ಜಗಳ ಬೇಡ, ದುಡಿಮೆ ಬೇಕು. ದುಡಿಮೆಯಿಂದಲೇ ಬದುಕು. ಜಗಳದಿಂದ ಬದುಕು ನಾಶ. ನಮ್ಮ ಸಮಯ ದುಡಿಮೆಗಿರಲಿ; ಜಗಳಕ್ಕೆ ಬಳಕೆಯಾಗದಿರಲಿ – ಈ ತಿಳಿವಿಗೆ ಕವನವಿಲ್ಲಿ ಮಿಡಿದಿದೆ. ಮತ್ತೆ ಕವಿಯ ಸೊಲ್ಲು ಕೇಳಿ :

ಹೂಳದಿರು ಸಿಡಿಬಾಂಬು ಗಡಿಗಲ್ಲ ಎದೆಯಲ್ಲಿ
....
ಜೀವ ಸಂಕುಲವಳಿದು ಗಡಿನಾಡು ಸುಡುಗಾಡು
ಸುಡುಬಾಂಬು ಬೇಡ ನೆಡುಗಿಡವ ತಂಪಾಡಲಿ (ಅದೇ ಕವನ)

–ಸುಡುಬಾಂಬು ಸಿಡಿಸಿ ಸಾವು ತರುವುದು ಬೇಡ; ಗಿಡ ನೆಟ್ಟು ತಂಪು ತರುವ ಕಾಯಕ ಬೇಕು. ಕವಿಯ ಮನಸ್ಸು ದೊಡ್ಡದಾಗಿ ಚಿಂತಿಸಿದೆ

ಇಲ್ಲಿ. ದುಃಖ, ನೋವನ್ನು ಸೃಷ್ಟಿಸುವುದು ಏಕೆ ? ಸುಖ, ಶಾಂತಿ, ನೆಮ್ಮದಿಯನ್ನು ನಿರ್ಮಾಣ ಮಾಡಬೇಕು. ಆ ಕಡೆಗೆ ನಮ್ಮ ಪ್ರಯತ್ನವಿರಲಿ – ಇದು ಕವಿಯ ಬಯಕೆ :

ಬದುಕು ರಸ ಪರ್ವದಾ ಕಲಶವೆಂದರೆ ಪ್ರೀತಿ
ಪ್ರೀತಿಯಿಲ್ಲದ ಬದುಕು ಶವದ ಕಾಲಿನ ತದಕು
ಹರಿದು ಬಂದರೆ ಪ್ರೀತಿ ನರಕುಲದ ನೆರವಣಿಗೆ
ಸಾಮರಸ್ಯದ ಅರಳು ಬಿರಿದು ತಂಪಾಡುವುದು

(ಪ್ರೀತಿ ಜೀವಿಯ ಗಮ್ಯ : ಪುಟ 56)

–ಪ್ರೀತಿಯೇ ಸಾಮರಸ್ಯದ ಸೋಪಾನ ಅಂದಿದ್ದಾರೆ. ಪ್ರೀತಿ ತುಂಬಿದ ಬದುಕಿಗೆ ಎಲ್ಲರೂ ಹಾತೊರೆಯಲಿ ಎಂಬುದಾಗಿ ಹಾರೈಸಿದ್ದಾರೆ.

ನಾನು ನಾನಲ್ಲ ನೀನು
ನೀನು ನನ್ನೆದೆಯ ಭಾನು (ಪುಟ : 82)

–ಅದ್ವೈತಭಾವದ ಈ ಕಾವ್ಯಸೊಲ್ಲು ಆತ್ಮ–ಪರಮಾತ್ಮಗಳ ಸಂಬಂಧವನ್ನು ನಿರೂಪಿಸುತ್ತದೆ. ಮಾನವ ಪ್ರೇಮ, ಜೀವಸಂಬಂಧವನ್ನು ಒತ್ತಿ ಹೇಳುತ್ತದೆ. ಹೀಗೆ ಬದುಕು–ಭಾವಗಳಿಗೆ ಪ್ರಾಮಾಣಿಕ ಅಭಿವ್ಯಕ್ತಿ ನೀಡಿದ್ದಾರೆ ಡಾ.ನಾಯಕರು.

ಮಕ್ಕಳಿಗಾಗಿಯೂ ಅವರು ಕವನ ಬರೆದಿದ್ದಾರೆ. 'ಮಕ್ಕಳೇ ದೇವರು' (2007)– ಇದು ಮಕ್ಕಳ ಕವನ ಸಂಕಲನ. ಎಪ್ಪತ್ತೆರಡು ಕವನಗಳು ಇಲ್ಲಿವೆ. ಮಕ್ಕಳ ನೂರೊಂದು ಭಾವನೆಗಳಿಗೆ ಮುದನೀಡುವ ಗುಣ ಈ ಕವನಗಳಿಗಿದೆ.

ಮಕ್ಕಳನ್ನು ದೇವರ ಕರುಳು, ದೇವರ ಹೃದಯ, ದೇವರ ಉಸಿರು, ದೇವರ ನಲುಮೆ, ದೇವರ ಕೂಸು, ದೇವರ ಶಕ್ತಿ–ಎಂದೆಲ್ಲ ಕೊಂಡಾಡಿದ್ದಾರೆ. 'ದೇವರ ಮೇಲೆ ಸಿಟ್ಟೇಕಪ್ಪಾ' ಕವನ ಸುಂದರವಾಗಿದೆ. ಅಪ್ಪನು ನುಕ್ಕಿಯ

ಬರಲಲ್ಲಿ ಖ್ಯಾತಿಗೆ ಬಾರಿಸಿದ. ಅವಳು ಕಣ್ಣೀರು ಸುರಿಸುತ್ತ "ದೇವರ ಮೇಲೆ ಸಿಟ್ಟೇಕಪ್ಪ" ಎಂದು ಕೇಳುತ್ತಾಳೆ. "ದೇವರಿಗೆ ಹೊಡೆವರೆ" ಎಂದು ಪ್ರಶ್ನಿಸುತ್ತಾಳೆ. "ನೀನೇ ಹೇಳಿದೆಯಲ್ಲ ಮಕ್ಕಳೇ ದೇವರು" ಎಂದು ಹೇಳಿ ಅಪ್ಪನನ್ನೇ ಚಕಿತಗೊಳಿಸುತ್ತಾಳೆ.

ತಪ್ಪಿನ ಅರಿವಾಗಿ ಅಪ್ಪ :

"ಮುದ್ದಿನ ಬಾಲೆಯ ಬಗಲಲ್ಲಪ್ಪಿ
ಕೆನ್ನೆಗೆ ಮುತ್ತನು ಕೊಟ್ಟೇಬಿಟ್ಟಾ"

ಮಕ್ಕಳಲ್ಲಿ ದೇವರನ್ನು ಕಾಣುವ ಹೃದಯ ಬಲುದೊಡ್ಡದು. ಆ ಭಾವ ಮನೆ-ಮನಸ್ಸನ್ನು ತುಂಬುತ್ತದೆ. ಅವರ ಮೃದು-ಮನಸ್ಸು ಮುದಗೊಳ್ಳುತ್ತದೆ. ಕವಿ ಹೇಳುತ್ತಾರೆ :

ತೊದಲಿನ ನುಡಿಯಲಿ ಮಗುವೊಡನಾಡು
ದೇವನೇ ಆಡುವ ಎಡೆಯಲ್ಲಿ
ಮಡಲಿನ ಪ್ಯಂಪಿಯ ಮಗುವಿಗೆ ನೀಡು
ಮುರಲೀಧರನೆ ಮನೆಯಲ್ಲಿ (ಮಕ್ಕಳೇ ದೇವರು : ಪುಟ : 3)

-ದೇವರಾಗಿ ಕಾಣುವ ಭಾವ ಸುಂದರ. ಇದು ಮನೆಯ ಸುಖವನ್ನು ಹೆಚ್ಚಿಸುತ್ತದೆ. ಮಕ್ಕಳ ಮನಸ್ಸು ನಗುವಂತೆ ಮಾಡುತ್ತದೆ.

ಹೊಳೆಯಲ್ಲಿ ಮುಳುಗಿ ಮಕ್ಕಳು ನುಣುಪಾದ ಕರಿಕಲ್ಲು ತರುತ್ತಾರೆ. ದೇವರೆಂದು ಪೂಜಿಸಿಖುಷಿ ಪಡುತ್ತಾರೆ. ಆ ದೇವರಲ್ಲಿ ಮಕ್ಕಳ ಬೇಡಿಕೆ ಇದು :

ಪುಸ್ತಕ ಭಾರವ ಕಡಿಮೆಯ ಮಾಡು
ನಾಲಗೆ ತಿರುಗದ ಇಂಗ್ಲಿಷ್ ದೂಡು

ಆದರೆ, ದೇವರು ವರ ನೀಡಿದನೆ ? ಕವಿ ಹೇಳುತ್ತಾರೆ :

ತರಳರ ಜೊತೆಗೆ ಕರಗದೆ ದೇವಾ
ಕೊನೆಗೂ ಗಿಡ ದಡಿ ಕಲ್ಲಾಗುಳಿದಾ.

ಕನ್ನಡವು ಮಕ್ಕಳ ಆನಂದ, ಇಂಗ್ಲಿಷು ದೊಡ್ಡವರ ಮರ್ಜಿ. ಈ ಮರ್ಜಿಗೆ ಮಕ್ಕಳು ತಲೆ ಕೊಡಬೇಕಲ್ಲ ! ಮಕ್ಕಳ ಪ್ರಾರ್ಥನೆಗೆ ದೇವರೂ ಕಿವಿಗೊಡಲಿಲ್ಲ. ಅವನೂ ದೊಡ್ಡವರ ಪರವಾಗಿ ಬಿಟ್ಟ. ಮಕ್ಕಳಿಗೇನು ಬೇಕು–ಯಾರೂ ಅವರನ್ನು ಕೇಳುವುದಿಲ್ಲ. ತಮಗೆ ಬೇಕಾದುದನ್ನೇ ಮಕ್ಕಳಿಗೂ ಕೊಡುತ್ತಾರೆ. ಕವಿ ಇದನ್ನು ನಾಜೂಕಾಗಿ ವಿಡಂಬಿಸಿದ್ದಾರೆ.

ಅಜ್ಜಾ ಅಜ್ಜಿ ಇಲ್ಲದ ಮನೆಯು
ಆಟಕೆ ಮಕ್ಕಳು ಸಿಕ್ಕದ ನೆರೆಯು
ಪುರಸತೆಯಿಲ್ಲದ ಅಪ್ಪ ಅವ್ವಾ
ಮನೆಯೇ ಆಗಿದೆ ಕೊಳ್ಳೀ ದೆವ್ವ

(ಮನೆಯೇ ಕೊಳ್ಳೀದೆವ್ವ : ಪುಟ : 17)

ಸಾಮಾನ್ಯವಾಗಿ ದೊಡ್ಡವರು ಮನೆಯಲ್ಲಿ ತಮ್ಮ ಅನುಕೂಲವನ್ನು ಮಾತ್ರ ಗಮನಿಸುತ್ತಾರೆ. ಮಕ್ಕಳಿಗೆ ಏನು ಬೇಕು–ಅದನ್ನು ನೋಡುವುದಿಲ್ಲ.

ಈ ಕವನಗಳು ಮಕ್ಕಳಿಗೆ ರಂಜನೆ ನೀಡುತ್ತವೆ; ತಿಳುವಳಿಕೆಯನ್ನು ಮೂಡಿಸುತ್ತವೆ; ಪ್ರಸಾದ ಸೊಗಸೂ ಇದೆ; ಗೇಯಗುಣದಿಂದಲೂ ಆಕರ್ಷಕವಾಗಿದೆ; ನಾಡು–ನುಡಿ ಪ್ರೇಮ, ನಿಸರ್ಗ ಪ್ರೇಮವನ್ನು ಎಳೆಯರಲ್ಲಿ ಅರಳಿಸುತ್ತದೆ. ಕುಣಿದು ಹಾಡುವ ಶಕ್ತಿ ಈ ಕವನಗಳದ್ದು.

ಜಾನಪದ ಪ್ರಕಾಶನ : ಜಾನಪದ ಪ್ರಕಾಶನ ಡಾ.ನಾಯಕರ ಮತ್ತೊಂದು ಸಾಧನೆ. 1982ರಲ್ಲಿ ಈ ಪ್ರಕಾಶನ ಆರಂಭಗೊಂಡಿತು. ತಾವು ಸಂಗ್ರಹಿಸಿದ ಜನಪದರ ಸಾಹಿತ್ಯ ಗೆದ್ದಲು ಪಾಲಾಗಬಾರದು. ಈ ಕಳಕಳಿಯೇ ಸ್ವಂತ ಪ್ರಕಾಶನಕ್ಕೆ ಪ್ರೇರಣೆಯಾಯಿತು. ಸ್ವಾಭಿಮಾನವೇ ಆಭರಣವಾಗುಳ್ಳ ಅವರು ಪುಸ್ತಕ ಪ್ರಕಟನೆಯಲ್ಲೂ ಸ್ವಾವಲಂಬಿಗಳಾದರು. ಪುಸ್ತಕ ಪ್ರಕಟನೆ ಕಷ್ಟ–ನಷ್ಟದ ಪ್ರಶ್ನೆಯಾದರೂ ನಾಯಕರು ದಿಟ್ಟತನದಿಂದಲೇ ಮುಂದಡಿಯಿಟ್ಟರು. ಶಾಂತಿನಾಯಕರೂ ಹೆಗಲು ಕೊಟ್ಟರು. ಈ ದಂಪತಿಗಳ ಹೆಚ್ಚಿನ ಪುಸ್ತಕಗಳೆಲ್ಲ ಜಾನಪದ

ಪ್ರಕಾಶನದಿಂದಲೇ ಪ್ರಕಟಗೊಂಡಿವೆ. ಮುಂದೆ ಈ ಪ್ರಕಾಶನವನ್ನೇ ಸಾಹಿತ್ಯ ವೇದಿಕೆಯಾಗಿ ರೂಪಿಸಿದರು. ಅನೇಕ ಸಾಹಿತ್ಯ ಚಟುವಟಿಕೆಗಳನ್ನು ಸಂಯೋಜಿಸಿದರು. ಇದಕ್ಕೆ ಸಾಂಸ್ಕೃತಿಕ ರೂಪ ಕೊಟ್ಟರು.

ಜನಪದ ದೀಪಾರಾಧನೆ : ಡಾ.ನಾಯಕರು ಜಾನಪದ ಪ್ರಕಾಶನದಿಂದ 1983ರಲ್ಲಿ ಹುಟ್ಟು ಹಾಕಿದ ಮತ್ತೊಂದು ಸಾಂಸ್ಕೃತಿಕ ಚಟುವಟಿಕೆ 'ಜಾನಪದ ದೀಪಾರಾಧನೆ'. ಇದು ವಾರ್ಷಿಕವಾಗಿ ಜರಗುವ ಕಾರ್ಯಕ್ರಮ. ಇಲ್ಲಿ ಜಾನಪದ ವಿಚಾರಗೋಷ್ಠಿ ನಡೆಯುತ್ತದೆ. ಪುಸ್ತಕ ಬಿಡುಗಡೆ ಸಮಾರಂಭ ಆಗುತ್ತದೆ. ಜನಪದ ಕವಿ-ಕಲಾವಿದರಿಗೆ, ಸಾಧಕರಿಗೆ ಸನ್ಮಾನ-ಗೌರವ ನಡೆಯುತ್ತದೆ. ಕಲಾ ಪ್ರದರ್ಶನ ನಡೆಯುತ್ತದೆ. ಜನಪದರ ತಿಂಡಿ, ಪಾನೀಯಗಳ ಪ್ರಾತ್ಯಕ್ಷಿಕತೆಯನ್ನು ಪ್ರದರ್ಶಿಸಲಾಗುತ್ತದೆ. ಕಲಾ ಪ್ರದರ್ಶನ ನಡೆಯುತ್ತದೆ. ಕಾರಂತ ದೀಪ, ಕುವೆಂಪು ದೀಪ, ದೇವಮ್ಮ ರಾಮನಾಯಕ ದೀಪ-ಈ ಹೆಸರಲ್ಲಿ ಪ್ರಶಸ್ತಿ ನೀಡಲಾಗುತ್ತದೆ-ಇವೆಲ್ಲ ಡಾ.ನಾಯಕರ ಸಾಂಸ್ಕೃತಿಕ ಆಸಕ್ತಿ, ಜನಪದರ ಜನಪದರ ಸಾಹಿತ್ಯದ ಮೇಲಿರುವ ಪ್ರೀತಿ, ಗೌರವ, ಅಭಿಮಾನ. ಅವರದ್ದು ದಣಿವಿರದ ದುಡಿಮೆ; ದುಡಿದಷ್ಟು ತಣಿಯದ ಮನಸ್ಸು; ಅದೇ ಅವರ ತಪಸ್ಸು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜಾನಪದ ಸಂಶೋಧನಾ ಕೇಂದ್ರವೊಂದು ನಿರ್ಮಾಣವಾಗಬೇಕು-ಇದು ಡಾ.ನಾಯಕರ ಹಂಬಲ. ಅವರು ಹಂಬಲಿಸುತ್ತ ಕುಳಿತು ಕೊಳ್ಳುವವರಲ್ಲ. ತಾವೇ ಅದಕ್ಕೆ ಏಕೆ ರುವಾರಿಯಾಗಬಾರದು ? ಜಾನಪದ ವಿಶ್ವಪ್ರತಿಷ್ಠಾನ ಈಗ ಮೊಳಕೆಯೊಡೆದಿದೆ. ಅದನ್ನು ಮುನ್ನಡೆಸುವ ಭಾರವನ್ನು ಮಗಳು ಡಾ.ಸವಿತಾ ನಾಯಕ ಹೊತ್ತಿದ್ದಾರೆ.

ಸಾಮಾಜಿಕ-ಶೈಕ್ಷಣಿಕ ಚಟುವಟಿಕೆಗಳು : ಡಾ.ನಾಯಕರ ಕಾರ್ಯಕ್ಷೇತ್ರ ವಿಸ್ತಾರವಾದುದು. ಜಾನಪದ ಅವರ ಬದುಕಾದರೂ ಇತರ ಕ್ಷೇತ್ರಗಳನ್ನು ನಿರ್ಲಕ್ಷ್ಯ ಮಾಡಿದವರಲ್ಲ. ಅವರು ಸಾಮಾಜಿಕ ಸ್ಪಂದನವುಳ್ಳವರು.

ವಿದ್ಯಾರ್ಥಿಯಾಗಿದ್ದಾಗಲೇ ತಮ್ಮ ಊರು ಭಾವಿಕೇರಿಯಲ್ಲಿ ಯುವಕ ಸಂಘ ಕಟ್ಟಿ ಸಾಮಾಜಿಕ ಸಾಂಸ್ಕೃತಿಕ ಚಟುಟಿಕೆಗಳಲ್ಲಿ ಭಾಗಿಯಾದವರು. ಅರವಿಂದ ಯಕ್ಷಗಾನ ಸಂಘದ ಅಧ್ಯಕ್ಷರಾಗಿ ಕಲಾ ಚಟುವಟಿಕೆಗಳಲ್ಲಿ ತೊಡಗಿದವರು. ಆರನೇ ತರಗತಿಯಲ್ಲಿರುವಾಗಲೇ ನಾಟಕ ಬರೆದು ಪ್ರದರ್ಶನ ನೀಡಿದವರು. ತಮ್ಮ ಪ್ರೌಢ ಅಧ್ಯಯನ ಕಾಲಾವಧಿಯಲ್ಲಿ ಅನೇಕ ನಾಟಕಗಳನ್ನು ಬರೆದಿರುವರು.

ಸ್ವತಃ ನಟಿಸಿ ಮೆಚ್ಚುಗೆ ಪಡೆದಿರುವರು. ವೃತ್ತಿ ಜೀವನಕ್ಕೆ ಕಾಲಿಟ್ಟಾಗಲೂ ರಂಗ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲೇ ಇದ್ದರು.

ಕರ್ನಾಟಕ ವಿಶ್ವವಿದ್ಯಾನಿಲಯದ ಅಕಾಡೆಮಿಕ್ ಕೌನ್ಸಿಲ್, ಕನ್ನಡ ಅಭ್ಯಾಸ ಮಂಡಳಿ, ಕಾಲೇಜ್ ಡೆವಲಪ್‌ಮೆಂಟ್ ಕೌನ್ಸಿಲ್, ಬೋರ್ಡ್ ಆಫ್ ಯೂನಿವರ್ಸಿಟಿ ಟೀಚಿಂಗ್, ಲೋಕಲ್ ಎನ್‌ಕ್ವಾಯರಿ ಕಮಿಟಿ, ಎನ್.ಎಸ್.ಎಸ್. ಎಡ್ವೈಜರಿ ಕಮಿಟಿ, ಹಂಪೆ ವಿಶ್ವವಿದ್ಯಾನಿಲಯದ ಬುಡಕಟ್ಟು ಅಧ್ಯಯನ ವಿಭಾಗ ಮಂಡಳಿ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ–ಹೀಗೆ ವಿವಿಧ ಕಡೆಗಳಲ್ಲಿ ಸದಸ್ಯರಾಗಿ ದುಡಿದಿರುವರು. ಕರ್ನಾಟಕ ವಿಶ್ವವಿದ್ಯಾನಿಲಯದ ಖಾಸಗಿ ಕಾಲೇಜುಗಳ ಪ್ರಾಂಶುಪಾಲರ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುವರು. ಹೊನ್ನಾವರದ, ಕರ್ನಾಟಕ ಸಂಘದ ಅಧ್ಯಕ್ಷರಾಗಿ ಸಾಹಿತ್ಯ ಚಟುವಟಿಕೆಗಳಿಗೆ ಚಾಲನೆ ನೀಡಿರುವರು.

ಪ್ರಶಸ್ತಿ–ಪುರಸ್ಕಾರ, ಗೌರವ :

ಡಾ.ನಾಯಕರಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ 'ಜಾನಪದ ತಜ್ಞ' (1993) ಪ್ರಶಸ್ತಿ ಬಂದಿದೆ. ಕರ್ನಾಟಕ ಸರಕಾರ ರಾಜ್ಯೋತ್ಸವ ಪ್ರಶಸ್ತಿ (2003) ನೀಡಿ ಗೌರವಿಸಿದೆ. ಗೌರೀಶ ಕಾಯ್ಕಿಣಿ ಪ್ರತಿಷ್ಠಾನ ಪ್ರಶಸ್ತಿ (2003)ಯನ್ನು ಪಡೆದಿರುವರು. ಬೇರೆ

ಬೇರೆ ಸಂಘ–ಸಂಸ್ಥೆ, ಪ್ರತಿಷ್ಠಾನಗಳು ಡಾ.ನಾಯಕರನ್ನು ಸನ್ಮಾನಿಸಿ ಪ್ರೀತಿ, ಗೌರವ ತೋರಿದ್ದಾರೆ. 'ಕೂಸಾಯ್ತು ನಮ್ಮ ಕೊಮರಾಗೆ' (1983), ಗಾಮೊಕ್ಕಲ ಮಹಾಭಾರತ (1992) 'ಸುಗ್ಗಿ ಹಬ್ಬ'(1999)–ಈ ಕೃತಿಗಳಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯಿಂದ ಬಹುಮಾನ ದೊರಕಿದೆ. 'ಹೇಳ್ತೇವೋ ಗುಮ್ಮೆ ಪದನಾವಾ', 'ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು', 'ಜೇಂಗೊಡ', 'ಕನ್ನಡ ಬಯಲಾಟ ಪರಂಪರೆ'– ಈ ಪುಸ್ತಕಗಳು ವಿಶ್ವವಿದ್ಯಾಲಯಗಳ ಪಠ್ಯಪುಸ್ತಕಗಳಾಗಿ ಮನ್ನಣೆ ಪಡೆದಿವೆ. ಉತ್ತರ ಕನ್ನಡಜಿಲ್ಲಾ ಪ್ರಥಮ ಜಾನಪದ ಸಮ್ಮೇಳನ, ಜಿಲ್ಲಾ ಏಳನೇ ಕನ್ನಡ ಸಾಹಿತ್ಯ ಸಮ್ಮೇಳನ, ಅಖಿಲ ಕರ್ನಾಟಕ 27ನೇ ಜಾನಪದ ಸಮ್ಮೇಳನ–ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಜಾನಪದ ಗೋಷ್ಠಿ– ಇವುಗಳ ಅಧ್ಯಕ್ಷತೆಯ ಗೌರವ ಡಾ.ನಾಯಕರಿಗೆ ಸಂದಿದೆ. 'ದೀಪಾರಾಧನೆ', 'ಕಲಶ' – ಇವೆರಡು ಅವರಿಗೆ ಸಂದ ಅಭಿನಂದನಾ ಗ್ರಂಥಗಳು. ಬದುಕು–ಬರೆಹ ಕುರಿತು ಎಂ.ಫಿಲ್ ಅಧ್ಯಯನ ಆಗಿದೆ. ಕಾವ್ಯಕೃತಿಗಳ ಕುರಿತು ಕಮಲಾ ಹೆಮ್ಮಿಗೆಯವರು 'ಸಾಲ ಸಂಪಿಗಿ ಗಮ್ಮಂದೊ' ವಿಮರ್ಶಾಕೃತಿ ತಂದಿರುವರು.

ವ್ಯಕ್ತಿತ್ವ

ಡಾ.ನಾಯಕರು ಸ್ವಾಭಿಮಾನಿಗಳು. ಆತ್ಮಗೌರವದ ಬಗ್ಗೆ ಎಚ್ಚರವುಳ್ಳವರು. ತಮ್ಮ ಆತ್ಮಗೌರವಕ್ಕೆ ಕುಂದಾಗುವುದನ್ನು ಸಹಿಸರು, ಬೇರೆಯವರಿಗೆ ಕುಂದು ಮಾಡಲಾರರು. ಆತ್ಮವಿಶ್ವಾಸ ಅವರ ಎಲ್ಲ ಸಾಧನೆಗಳ ಹಿನ್ನೆಲೆ ಶಕ್ತಿ. ಸ್ವಯಂ ಪರಿಶ್ರಮ ಅವರಿಗೆ ಇಷ್ಟ. ಯಾವುದೇ ಕಾರ್ಯವಿರಲಿ ಸಂಕಲ್ಪ ಮಾಡಿದ ಮೇಲೆ ಕೈ ಬಿಡುವವರಲ್ಲ. ಸಾಧಿಸುವ ಹಟ. ಸೋಲು ಗೆಲುವಿನ ಪ್ರಶ್ನೆಯಲ್ಲ. ಪ್ರಯತ್ನಕ್ಕೆ ಫಲವಿದೆ ಎಂದು ನಂಬಿದವರು.

ನಾಯಕರಿಗೆ ಅನ್ಯಾಯ ಸೇರದು. ಎಲ್ಲೇ ಆಗಲಿ, ಯಾರೇ ಆಗಲಿ

ಅದರ ವಿರುದ್ಧ ಧ್ವನಿ ಎತ್ತುವವರೆ. ಖಂಡುತುಂಡಾಗಿ ಮಾತಾಡುವವರೆ. ಅವರ ಮನಸ್ಸು ನೇರ, ಮಾತೂ ನೇರ. ಭಾಷಣ ಮಾಡುವಾಗಲೂ ಅಷ್ಟೆ, ತಮಗನಿಸಿದ್ದನ್ನು ನಿರ್ಭಿಡೆಯಿಂದ ಹೇಳುವವರೆ. ಸತ್ಯವನ್ನು ಮರೆಮಾಚುವವರಲ್ಲ, ಸುಳ್ಳಿಗೆ ಬಣ್ಣ ಹಚ್ಚುವವರಲ್ಲ.

ಡಾ.ನಾಯಕರು ಒಂದು ಕೆಲಸ ಮಾಡಿ ಅದು ಪೂರೈಸಿತು ಎಂದು ಮತ್ತೆ ಸುಮ್ಮನೆ ಕೂರುವವರಲ್ಲ ಅಥವಾ ಅದನ್ನೇ ವೈಭವೀಕರಿಸಿಕೊಳ್ಳುತ್ತ ಇರುವವರಲ್ಲ, ಅದು ಮುಗಿಯುತ್ತಿರುವಂತೆ ಮತ್ತೊಂದು ಕಾರ್ಯದ ಕಡೆಗೆ ಅವರ ಚಿಂತನೆ ಹರಿಯುತ್ತದೆ. ಸದಾ ಕ್ರಿಯಾಶೀಲತೆ ಅವರ ಪ್ರವೃತ್ತಿ. ನಿರುತ್ಸಾಹ ಅವರ ಹತ್ತಿರ ಸುಳಿಯುವುದಿಲ್ಲ. ದಣಿವು–ದಾವತಿಗೆ ಮಣಿವವರಲ್ಲ. ಕಾಯವಿರುವುದೇ ದುಡಿಯುವುದಕ್ಕಾಗಿ–ಈ ಅರಿವಿನಲ್ಲೇ ಅವರು ಬೆಳೆದವರು.

ನಿರಂತರ ಅಧ್ಯಯನ ಅವರ ಸ್ವಭಾವ. ಶಿಷ್ಯವಾತ್ಸಲ್ಯ ಅಪಾರ. ಜನಪದರೆಂದರೆ ಜೀವ. ಅವರ ಕಲೆ, ಸಾಹಿತ್ಯವೇ ನಾಯಕರ ಪಾಲಿಗೆ ಅನರ್ಘ್ಯಸಂಪತ್ತು. ಈ ಸಂಪತ್ತೆ ನಮ್ಮ ನಿಜವಾದ ಶಕ್ತಿ ಎಂದು ತಿಳಿದವರು. ಅದನ್ನು ಉಳಿಸಿಕೊಳ್ಳುವುದಕ್ಕಾಗಿ ಇಡೀ ಬದುಕನ್ನು ಸಮರ್ಪಿಸಿಕೊಂಡವರು.

ಅವರ ಸಾಮಾಜಿಕ ಕಳಕಳಿ ವಿಶೇಷವಾದುದು. ಶ್ರೇಣೀಕೃತ ಸಮಾಜ ವ್ಯವಸ್ಥೆಯನ್ನು ಅವರು ಇಷ್ಟಪಡುವುದಿಲ್ಲ. ವರ್ಗ, ವರ್ಣ, ಮತಧರ್ಮ ಜಾತಿ ಭೇದ ಅವರಿಗೆ ಹಿಡಿಸದು. ಮಾನವ ಸಮಾಜವೊಂದೇ ಎಂಬ ದೃಷ್ಟಾರರು ಅವರು. ಮಾನವ ಕುಲದ ಉದ್ಧಾರಕ್ಕಾಗಿ ನಾವೆಲ್ಲ ಒಂದುಗೂಡಿ ದುಡಿಯಬೇಕು. ಒಂದುಗೂಡಿ ಬಾಳಬೇಕು ಅನ್ನುವವರು. ಆಡುವುದಕ್ಕಿಂತ ಬದುಕಿ ತೋರಿಸಬೇಕು ಎಂಬ ಸತ್ಯವನ್ನು ಮೆಚ್ಚಿಕೊಂಡವರು.

ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅಪಾರ ಪ್ರೀತಿ. ಕನ್ನಡ ಅವರ

ಪ್ರಾಣಶಕ್ತಿ. ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಅನ್ಯಾಯವಾಗುತ್ತಿರುವುದರ ಬಗ್ಗೆ ಅವರಿಗೆ ವಿಷಾದವಿದೆ. ಸಮಯಸಾಧಕರಾಜಕಾರಣದ ಬಗ್ಗೆ ಅಸಮಾಧಾನವಿದೆ. ಕನ್ನಡಿಗರು ಕನ್ನಡವನ್ನು ಪ್ರೀತಿಸಬೇಕು. ಅಭಿಮಾನ ಪಡಬೇಕು. ಕನ್ನಡಗರಿಂದಲೇ ಕನ್ನಡದ ಉದ್ಧಾರ – ಇದು ನಾಯಕರ ಚಿಂತನೆ. ವೈಜ್ಞಾನಿಕವಾಗಿ ವೈಚಾರಿಕವಾಗಿ ನಾವು ಬೆಳೆಯಬೇಕು. ಕನ್ನಡದಾರಿಯಲ್ಲಿ ನಾವು ಗುರಿ ತಲುಪಬೇಕು – ಇದು ಡಾ.ನಾಯಕರ ಜೀವನ ನೀತಿ.

♦♦♦♦♦

ಡಾ. ಎನ್. ಆರ್. ನಾಯಕ

ಡಾ. ಎನ್. ಆರ್. ನಾಯಕ ಅವರು ಉತ್ತರ ಕನ್ನಡ ಜಿಲ್ಲೆಯ ಜಾನಪದ ವಿದ್ವಾಂಸರಲ್ಲಿ ಅಗ್ರಗಣ್ಯರು. ಅವರು ಜನಪದ ಸಾಹಿತ್ಯ ಸಂಗ್ರಹ, ಸಂಪಾದನೆ, ಪ್ರಕಟಣೆ, ಪ್ರಸಾರಗಳಲ್ಲಿ ಹೆಸರಾಗಿದ್ದಾರೆ; ಹಲವು ಮೌಲಿಕ ಗ್ರಂಥಗಳನ್ನು ಬರೆದು ಪ್ರಕಟಿಸಿ, ಜಾನಪದ ಅಧ್ಯಯನಕ್ಕೆ ಆಕರ ಸಾಮಗ್ರಿಯನ್ನು ಒದಗಿಸಿದ್ದಾರೆ. ಅವರ ಜಾನಪದ ಪ್ರೀತಿ ಅನನ್ಯವಾದದ್ದು. ಅವರು ಸೃಜನಶೀಲ ಲೇಖಕರೂ ಹೌದು. ಶ್ರೀ ಸುಮುಖಾನಂದ ಜಲವಳ್ಳಿ ಅವರು ಡಾ. ನಾಯಕರ ಬದುಕು ಬರಹಗಳ ಮಹತ್ವವನ್ನು ಆತ್ಮೀಯವಾಗಿ ಪರಿಚಯಿಸಿದ್ದಾರೆ.

ಪ್ರೊ. ಡಿ. ಲಿಂಗಯ್ಯ

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ,
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪
E-mail : janapadaparishath@hotmail.com